

# ಉಜ್ಜೀವನ

# ಉಜ್ಜೀವನದಲ್ಲಿರುವ ಒಂದು ಸಭೆ

"... ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಲಿಗೆ ಸೇರಿಸುತ್ತಿದ್ದನು."
ಅಪೋಸ್ತಲರ ಕೃತ್ಯಗಳು 2:47

ಅಶೀಷ್ ರಾಯಚೂರ್

**ಉಚಿತವಾದ ಹಂಚಿಕೆಗಾಗಿ ಮಾತ್ರ**
ಮುದ್ರಣ ಮತ್ತು ಹಂಚಿಕೆ: ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್, ಬೆಂಗಳೂರು
ಪ್ರಸ್ತುತಪ್ರತಿ: 2024

**ಸಂಪರ್ಕ ಮಾಹಿತಿ**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

ದೂರವಾಣಿ: +91-80-25452617
ಇಮೇಲ್: **bookrequest@apcwo.org**
ವೆಬ್ಸೈಟ್: **apcwo.org**

ಬೇರೆ ರೀತಿಯಲ್ಲಿ ಸೂಚಿಸಿದ ಹೊರತು, ಎಲ್ಲಾ ಧರ್ಮಗ್ರಂಥದ ಉಲ್ಲೇಖಗಳನ್ನು ಕನ್ನಡ ಸತ್ಯವೇದವು - ಜೆ.ವಿ - (ಬಿ ಎಸ್ ಐ), ಆವೃತ್ತಿಯಿಂದ ತೆಗೆದುಕೊಳ್ಳಲಾಗಿದೆ. ಬೈಬಲ್ ಸೊಸೈಟಿ ಆಫ್ ಇಂಡಿಯಾದ(BSI) ಅನುಮತಿಯಿಂದ ಬಳಸಲಾಗಿದೆ.

**ಉಚಿತ ವಿತರಣೆಗಾಗಿ**
ಈ ಪುಸ್ತಕದ ಉಚಿತ ವಿವರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ಆಲ್ ಪೀಪಲ್ಸ್ ಸಭೆಯೊಟ್ಟಿಗೆ ಪಾಲುದಾರರಾಗಲೂ **apcwo.org/give** ಅಥವಾ ಈ ಪುಸ್ತಕದ ಹಿಂಭಾಗದ ಪುಟಗಳಲ್ಲಿರುವ ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ ಎಂಬ ಪುಟದಲ್ಲಿ ಹೇಗೆ ಸಹಾಯ ಮಾಡಬಹುದೆಂಬುದನ್ನು ನೋಡಿರಿ. ವಂದನೆಗಳು!

**ಉಚಿತ ಸಂಪನ್ಮೂಲಗಳು ಮತ್ತು ಸಂಬಂಧಿತ ವೆಬ್‌ಸೈಟ್‌ಗಳು**
**ಪ್ರಸಂಗಗಳು:** apcwo.org/sermons | **ಪುಸ್ತಕಗಳು:** apcwo.org/books
**ಚರ್ಚ್ ಆಪ್:** apcwo.org/app | **ಸತ್ಯವೇದ ಕಾಲೇಜು:** apcbiblecollege.org
**ಇ-ಕಲಿಕೆ:** apcbiblecollege.org/elearn | **ಸಲಹಾ ಸೇವೆ:** chrysalislife.org
**ಸಂಗೀತ:** apcmusic.org | **ಸೇವಕರುಗಳ ಅನ್ಯೋನ್ಯತೆ:** pamfi.org
**ಏಪಿಸಿ ಪ್ರಪಂಚ ಸೇವೆಗಳು:** apcworldmissions.org

(Kannada - A Church In Revival)

"... ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಲಿಗೆ ಸೇರಿಸುತ್ತಿದ್ದನು."

ಅಪೋಸ್ತಲರ ಕೃತ್ಯಗಳು 2:47

# ಉಜ್ಜೀವನ

## ಉಜ್ಜೀವನದಲ್ಲಿರುವ ಒಂದು ಸಭೆ

# ಪರಿವಿಡಿ

ಪರಿಚಯ

1. ಯೆರುಸಲೇಮಿನಲ್ಲಿರುವ ಸಭೆ 1

2. ಉಜ್ಜೀವನದಲ್ಲಿರುವ ಒಂದು ಸಭೆ 9

# ಪರಿಚಯ

ಉಜ್ಜೀವನವು ದೇವರ ಸಂದರ್ಶನದ ಒಂದು ಕಾಲವಾಗಿದೆ. ಇದು ಭೂಮಿಯ ಮೇಲೆ ಪರಲೋಕದ ಸುರಿಸುವಿಕೆಯ ಒಂದು ಕಾಲವಾಗಿದೆ. ಸಂದರ್ಶನದ ಕಾಲದಲ್ಲಿ ಸಂಗತಿಗಳು ವ್ಯತ್ಯಾಸಕರವಾಗಿರುತ್ತದೆ! 2008 ಪ್ರಾರಂಭಿಸಿದಾಗ ಅಂದರೆ ಈ ಪುಸ್ತಕ ಬರೆಯಲ್ಪಟ್ಟ ವರ್ಷ, ಕರ್ತನಿಂದ ನಾವು ಹೊಂದಿದ ವಾಕ್ಯವೇನೆಂದರೆ ಈ ವರ್ಷವು ಆತ್ಮೀಕ ಮತ್ತು ಭೌತಿಕ ಸುರಿಸುವಿಕೆಯ ವರ್ಷವಾಗಿರುತ್ತದೆ. ನಾವು ಪ್ರವೇಶಿಸುತ್ತಿರುವ ಎಲ್ಲದರ ಬಗ್ಗೆ ನಮಗೆ ಅಗತ್ಯವಾಗಿ ತಿಳಿಯದಿದ್ದರೂ, ಈ ವರ್ಷವು ಸುರಿಸುವಿಕೆಯ ವರ್ಷವೆಂದು ದೇವರು ಹೇಳುತ್ತಿದ್ದಾನೆ ಎಂದು ನಮಗೆ ತಿಳಿದಿತ್ತು. ಸಂಗತಿಗಳು ಸಂಭವಿಸುವದನ್ನು ವರ್ಷದ ನಂತರದಲ್ಲಿ ಮಾತ್ರ ನಾವು ಕಾಣಲು ಪ್ರಾರಂಭಿಸಿದೆವು ಮತ್ತು ಈಗ ನಾವು ದೇವರು ವಾಗ್ದಾನ ಮಾಡಿದವುಗಳ ಕಡೆಗೆ ಸಾಗುತ್ತಾ ಮತ್ತು ಒಂದು ಉಜ್ಜೀವನವನ್ನು, ಒಂದು ಸುರಿಸುವಿಕೆಯನ್ನು, ಪರಲೋಕದ ಒಂದು ಸಂದರ್ಶನವನ್ನು ಸ್ವಾಗತಿಸಲು ನಮ್ಮನ್ನೇ ನಾವು ಸ್ಥಾನಿಕರಿಸುವವರಾಗಿದ್ದೇವೆ.

ಉಜ್ಜೀವನವನ್ನು ಕಳುಹಿಸಿಕೊಡಬೇಕೆಂಬದಾಗಿ ದೇವರಲ್ಲಿ ಪ್ರಾರ್ಥಿಸುತ್ತಾ ಕೇಳುತ್ತೇವೆ—ಒಂದು ಸುರಿಸುವಿಕೆ ಅಥವಾ ಒಂದು ಸಂದರ್ಶನ—ಆದರೆ ಉಜ್ಜೀವನ ಸಂಭವಿಸುವಾಗ ಅದಕ್ಕೆ ನಾವು ಸಿದ್ಧರಿದ್ದೇವೋ? ಉಜ್ಜೀವನ ಕಾಣಿಸಿಕೊಳ್ಳುವಾಗ ನಾವು ಅದಕ್ಕೆ ಸಿದ್ಧರಿರಬೇಕು!

ಉಜ್ಜೀವನ ಸಂಭವಿಸುವಾಗ ಒಂದು ಸಭೆ ಹೇಗೆ ಕಾಣಿಸುತ್ತದೆ? ಪರಲೋಕದ ಒಂದು ಸುರಿಸುವಿಕೆ, ದೇವರ ಒಂದು ಆತ್ಮೀಕ ಸಂದರ್ಶನವಾಗುವಾಗ—ನಾವು ಒಂದು ಉಜ್ಜೀವನದ ನಡುವೆ ಇರುವಾಗ ನನಗೆ ಮತ್ತು ನಿಮಗೆ ಏನು ಸಂಭವಿಸುತ್ತದೆ? ಒಂದು ಖಚಿತವಾದ ಸಂಗತಿಯೇನಂದರೆ ಸಭೆ ನಮಗೆ ಈಗ ತಿಳಿದಿರುವಂತೆ ಕಾಣಿಸುವದಿಲ್ಲ. ನಾವು ಭಾನುವಾರ ಸಭೆಗೆ ಕೂಡಿ ಬರುವಾಗ, ಸಾಮಾನ್ಯವಾಗಿ ಸಭಾಪಾಲಕರು ಸಂದೇಶ ಮುಗಿಸುವ ವರೆಗೆ ನಾವು ಕಾಯುತ್ತೇವೆ! ನಮ್ಮಲ್ಲಿ ಕೆಲವರು ಅದರ ಮಧ್ಯದಲ್ಲಿ ಮಲಗಬಹುದು ಮತ್ತು ಮನೆಗೆ ಹೋಗಬಹುದು! ಆದರೆ ದೇವರಿಂದ ಸಂದರ್ಶನ ಬರುವಾಗ ಸಭೆಯು ಬಹಳ ವಿಭಿನ್ನವಾಗಿರುತ್ತದೆ! ದೇವರ ಸುರಿಸುವಿಕೆಗಾಗಿ ಸಿದ್ಧವಾಗಿರ್ರಿ!

ದೇವರು ನಿಮ್ಮನ್ನು ಆಶೀರ್ವದಿಸಲಿ!
ಆಶೀಷ್ ರಾಯಚೂರ್

# 1
# ಯೆರುಸಲೇಮಿನಲ್ಲಿರುವ ಸಭೆ

ಈ ಪುಸ್ತಕದ ಉದ್ದೇಶವು ದೇವರ ಚಲಿಸುವಿಕೆಯಿರುವಾಗ ಮತ್ತು ನಾವು ಆತನಿಂದಾಗುವ ಸಂದರ್ಶನದೊಳಗೆ ಸಾಗುವಾಗ ಸಭೆಯ ಜೀವಿತವು ಹೇಗಿರುತ್ತದೆ ಎಂಬ ಚಿತ್ರವನ್ನು ಅಥವಾ ದರ್ಶನವನ್ನು ನಮಗೆ ಕೊಡುವದಾಗಿದೆ. ನಾವು ಅಪೋಸ್ತಲರ ಕೃತ್ಯಗಳ ಮೊದಲ ಎಂಟು ಅಧ್ಯಾಯಗಳನ್ನು ಅಧ್ಯಯನ ಮಾಡೋಣ ಮತ್ತು ಯೆರುಸಲೇಮಿನಲ್ಲಿ ಹರಡಿದ ಉಜ್ಜೀವನದ ಕೆಲವು ಉನ್ನತ ಅಂಶಗಳನ್ನು ಆರಿಸಿಕೊಳ್ಳೋಣ—ಯೆರುಸಲೇಮಿನಲ್ಲಿರುವ ಸಭೆಗೆ ಜನ್ಮ ಕೊಟ್ಟ ಒಂದು ಸಂದರ್ಶನ! ಪರಲೋಕದಿಂದಾದ ಸಂದರ್ಶನದ ಮಧ್ಯದಲ್ಲಿ ಹುಟ್ಟಿದ ಯೆರುಸಲೇಮಿನಲ್ಲಿರುವ ಸಭೆಯ ಮೂಲಕ "ಉಜ್ಜೀವನದ" ಬಗ್ಗೆ ಮತ್ತು ಸಭೆಯ ಜೀವನ ಹೇಗಿರುತ್ತದೆ ಎಂದು ನಾವು ಕಲಿಯಬಹುದು.

## ಐಕ್ಯತೆಯಲ್ಲಿ ಮತ್ತು ಪ್ರಾರ್ಥನೆಯಲ್ಲಿ ಹುಟ್ಟಿದ್ದು

ಉಜ್ಜೀವನಕ್ಕೆ ಮುನ್ಸೂಚಕಗಳಲ್ಲಿ ಒಂದು ಯಾವುದಾಗಿತ್ತು? ಪರಲೋಕದ ಸುರಿಸುವಿಕೆಯೊಳಗೆ ವಾಸ್ತವಿಕವಾಗಿ ಹೆಜ್ಜೆಯನಿಡುವ ಮೊದಲು ಯೆರುಸಲೇಮಿನ ಜನರು ಹಾದು ಹೋದಂತಹ ಸಿದ್ಧತೆಗಳೇನಾಗಿತ್ತು? ಅಲ್ಲಿ ಬರಬೇಕಾದ ಒಂದು ಸುರಿಸುವಿಕೆಯಿದ್ದದ್ದರಿಂದ ಯೆರುಸಲೇಮಿನಲ್ಲೇ ಕಾಯುತ್ತಿರಬೇಕೆಂದು ತನ್ನ ಶಿಷ್ಯರಿಗೆ ಯೇಸು ಸೂಚಿಸಿದ್ದನು. ಆತನು ಒಂದು ನಿರ್ದಿಷ್ಟವಾದ ಸ್ಥಳವನ್ನು ಅವರಿಗೆ ಕೊಟ್ಟನು ಮತ್ತು ಅಲ್ಲೇ ಕಾಯುತ್ತಿರಬೇಕೆಂದು ಹೇಳಿದನು. ಉಜ್ಜೀವನದ ಸುರಿಸುವಿಕೆಯ ಮುನ್ಸೂಚನೆಯನ್ನು ಅಪೋಸ್ತಲರ ಕೃತ್ಯಗಳು 1:14 ರಲ್ಲಿ ಉಲ್ಲೇಖಿಸಲಾಗಿದೆ.

**ಅಪೋಸ್ತಲರ ಕೃತ್ಯಗಳು 1:14**
**ಇವರೆಲ್ಲರು ಏಕಮನಸ್ಸಾಗಿ ದೇವರ ಪ್ರಾರ್ಥನೆಯಲ್ಲಿ ನಿರತರಾಗಿದ್ದರು. ಕೆಲವು ಮಂದಿ ಹೆಂಗಸರೂ ಯೇಸುವಿನ ತಾಯಿಯಾದ ಮರಿಯಳೂ ಆತನ ತಮ್ಮಂದಿರೂ ಅವರ ಸಂಗಡ ಇದ್ದರು.**

ಯೆರುಸಲೇಮಿನಲ್ಲಿರುವ ಎಲ್ಲಾ 120 ಮಂದಿ ಶಿಷ್ಯರು ಒಂದು ಒಪ್ಪಂದದೊಂದಿಗೆ ಪ್ರಾರ್ಥನೆ ಮತ್ತು ವಿಜ್ಞಾಪನೆಗಳಲ್ಲಿ ಮುಂದುವರೆದರು. ಗಮನಿಸಬೇಕಾದ ಎರಡು ಅಂಶಗಳು ಅಲ್ಲಿವೆ.

## *ಒಂದು ಒಪ್ಪಂದ—ಒಂದು ಮನಸ್ಸಿನಲ್ಲಿರುವದು*

ಮೊದಲನೆಯದಾಗಿ "ಒಂದು ಒಪ್ಪಂದ" ದಲ್ಲಿರುವದು ಅದರ ಅರ್ಥ "ಒಂದು ಮನಸ್ಸುಳ್ಳ" ವರಾಗಿರುವದು. ಸತ್ಯವೇದವು ಹೇಳುತ್ತದೆ ಅವರು ಒಂದು

ಒಪ್ಪಂದದೊಂದಿಗೆ ಮುಂದುವರೆದರು. ಒಂದು ಒಪ್ಪಂದದೊಂದಿಗೆ ಅವರು ಪ್ರಾರಂಭಿಸಿದಷ್ಟೆ ಅಲ್ಲ ಆದರೆ ಒಂದು ಒಪ್ಪಂದದೊಂದಿಗೆ ಮುಂದುವರೆದರು. ಹಾಗಾಗಿ, ಐಕ್ಯತೆ—ಒಟ್ಟಾಗಿರುವದು, ಒಂದು ಮನಸುಳ್ಳವರಾಗಿರುವದು, ಮತ್ತು ಒಂದು ಉದ್ದೇಶವುಳ್ಳವರಾಗಿರುವದು—ಅತ್ಯಗತ್ಯವಾಗಿದೆ. ದೇವರ ಸುರಿಸುವಿಕೆಯ ಅಡಿಯಲ್ಲಿ ಬರಬೇಕಾದರೆ ಒಂದೇ ಸಂಗತಿಯ ಕಡೆಗೆ ತಳ್ಳುವದು ಅಥವಾ ಒಂದೇ ಸಂಗತಿಯ ಕಡೆಗೆ ಚಲಿಸುವದು ಒಂದು ಪ್ರಾಮುಖ್ಯವಾದ ಪೂರ್ವಾಪೇಕ್ಷೆಯಾಗಿದೆ. ಒಂದು ಐಕ್ಯತೆಯಿರುವ ವಾತಾವರಣದಲ್ಲಿ ಒಂದು ಸುರಿಸುವಿಕೆಯಿರುತ್ತದೆ. ದೇವರು ತನ್ನ ಆಶೀರ್ವಾದಗಳನ್ನು ಅಲ್ಲಿ ಆಜ್ಞಾಪಿಸುತ್ತಾನೆ.

**ಕೀರ್ತನೆಗಳು 133:1-3**

**1 ಆಹಾ, ಸಹೋದರರು ಒಂದಾಗಿರುವದು**
**ಎಷ್ಟೋ ಒಳ್ಳೇದು, ಎಷ್ಟೋ ರಮ್ಯವಾದದ್ದು!**
**2 ಅದು ಆರೋನನ ತಲೆಯ ಮೇಲೆ ಹಾಕಲ್ಪಟ್ಟು ಅವನ ಗಡ್ಡದ ಮೇಲೆಯೂ ಅಲ್ಲಿಂದ ಅವನ ಅಂಗಿಗಳ ಕೊರಳಪಟ್ಟಿಯವರೆಗೂ ಹರಿದುಬರುವ ಶ್ರೇಷ್ಠತೈಲದಂತೆಯೂ**
**3 ಹೆರ್ಮೋನ್‍ಪರ್ವತದಲ್ಲಿ ಹುಟ್ಟಿ ಚೀಯೋನ್‍ಪರ್ವತದ ಮೇಲೆ ಬೀಳುವ ಮಂಜಿನಂತೆಯೂ ಇದೆ. ಅಲ್ಲಿ ಆಶೀರ್ವಾದವೂ ಜೀವವೂ ಸದಾಕಾಲ ಇರಬೇಕೆಂದು ಯೆಹೋವನು ಆಜ್ಞಾಪಿಸಿದ್ದಾನೆ.**

ಇದರ ಅರ್ಥವೇನೆಂದರೆ ಸುರಿಸುವಿಕೆಯೊಳಗೆ ಬರುವದಕ್ಕೆ ಒಂದು ಪೂರ್ವಸಿದ್ಧತಾ ಪ್ರಕ್ರಿಯೆಯಾಗಿ, ನೀವು ಮತ್ತು ನಾನು ಆತ್ಮನ ಐಕ್ಯತೆಯಲ್ಲಿ ನಡೆಯುವದನ್ನು ಕಾಪಾಡಿಕೊಳ್ಳಲು—ನಾವು ದೇವರಿಗಾಗಿ ಹಸಿದವರಾಗಿದ್ದೇವೆ ಮತ್ತು ಇನ್ನೂ ಹೆಚ್ಚಾಗಿ ಆತನು ಬೇಕು ಎಂಬ ಈ ಸಾಮಾನ್ಯ ಉದ್ದೇಶವನ್ನು ನಮ್ಮ ಮುಂದೆ ಇಟ್ಟುಕೊಂಡವರಾಗಿರಬೇಕು. ದೇವ ಜನರು ಐಕ್ಯತೆಯಲ್ಲಿ ಒಟ್ಟಾಗಿ ಕೂಡಿ ಬರುವಾಗ ಹೆಸರು, ಪಂಗಡ, ಸೈದ್ಧಾಂತಿಕ ವ್ಯತ್ಯಾಸಗಳನ್ನು ಮತ್ತು ಸಣ್ಣ ಪುಟ್ಟ ಜಗಳಗಳನ್ನು ಪಕ್ಕಕ್ಕೆ ಹಾಕಿ ದೇವರನ್ನು ಹುಡುಕುವ ಒಂದೇ ಉದ್ದೇಶದಿಂದ ಬರುವದಾದರೆ ಅಲ್ಲಿ ಆತನ ಪವಿತ್ರಾತ್ಮನ ಪ್ರಸನ್ನತೆ ಮತ್ತು ಶಕ್ತಿಯ ಒಂದು ಬಲವಾದ ಸುರಿಸುವಿಕೆಯಿರುತ್ತದೆ. ತಲೆಯಿಂದ ಕಾಲ್ಬೆರಳ ತನಕ, ಶ್ರೇಷ್ಠ ರಿಂದ ಕನಿಷ್ಠರ ವರೆಗೆ ಎಲ್ಲರ ಮೇಲೆ ಅಲ್ಲಿ ಅಭಿಷೇಕದ, ಉಲ್ಲಾಸದ, ಆಶೀರ್ವಾದದ, ಜೀವದ ಸುರಿಸುವಿಕೆಯು ಇರುತ್ತದೆ!

## ಪ್ರಾರ್ಥನೆ ಮತ್ತು ವಿಜ್ಞಾಪನೆ

ಎರಡನೇ ಅಂಶವೇನೆಂದರೆ ಯೆರುಸಲೇಮಿನಲ್ಲಿ ಸೇರಿ ಬರುತ್ತಿದ್ದ ಸಭೆಯಲ್ಲಿ ಪ್ರಾರ್ಥನೆ ಮತ್ತು ವಿಜ್ಞಾಪನೆ ಇತ್ತು. ಅವರು ಪ್ರಾರ್ಥನೆಯಲ್ಲಿ, ವಿಜ್ಞಾಪನೆಯಲ್ಲಿ ಮತ್ತು ಮಧ್ಯಸ್ಥಿಕೆಯಲ್ಲಿ ಮುಂದುವರೆದರು. ಅವರು ಒಂದು ಒಪ್ಪಂದದೊಂದಿಗೆ ಒಂದುಗೂಡಿ ಪ್ರಾರ್ಥನೆ ಮತ್ತು ವಿಜ್ಞಾಪನೆಗಳನ್ನು ಸಲ್ಲಿಸಿದರು—ದೇವರ ಸುರಿಸುವಿಕೆಯ ಒಂದು ಮುನ್ಸೂಚನೆಯಾಗಿದೆ.

ನಾವು ತಿಳಿಯುತ್ತಾ ಬರುತ್ತಿರುವ ದೇವರನ್ನು ಅನುಭವಿಸದೆ, ಮುಂದಿನ 50 ವರ್ಷಗಳು ನಾವು ಸಭೆಯಲ್ಲಿ ಹಾಜರಾಗುತ್ತಾ, ಪ್ರತಿ ಭಾನುವಾರ ಎರಡು ತಾಸು ಕುಳಿತುಕೊಳ್ಳುತ್ತಾ ಮತ್ತು ಸುಂದರವಾದ ಸಂದೇಶಗಳನ್ನು ಕೇಳಿಸಿಕೊಳ್ಳುತ್ತಾ, ಒಳ್ಳೆಯ ಅನುಭವವಾಗುತ್ತಾ, ನಾವು ದೇವರ ಜ್ಞಾನ ಹೆಚ್ಚಿಸಿಕೊಳ್ಳುತ್ತಾ ಇರುವದರಲ್ಲಿ ನಮಗೆ ಯಾವ ಅರ್ಥವು ಇಲ್ಲ. ದೇವರ ಜ್ಞಾನದಲ್ಲಿ ಹೆಚ್ಚುವದು ಮತ್ತು ಆತನನ್ನು ಅನುಭವಿಸುವದು ಎರಡೂ ವ್ಯತ್ಯಾಸಕರವಾದ ಸಂಗತಿಗಳಾಗಿವೆ. ಕ್ರೈಸ್ತತ್ವವು ಕೇವಲ ಜ್ಞಾನವನ್ನು ಆಧರಿಸಿಲ್ಲ; ಇದು ದೇವರೊಂದಿಗಿನ ಅನುಭವವಾಗಿದೆ. ನಾವು ಕೇವಲ ಸಭೆಗೆ ಹಾಜರಾಗುವದರಲ್ಲಿ ಆಯಾಸಗೊಂಡವರಾಗಿರಬೇಕು ಮತ್ತು ದೇವರನ್ನು ಹೆಚ್ಚಾಗಿ ಬಯಸುವದರಲ್ಲಿ ತೀವ್ರವಾಗಿರಬೇಕು.

ಹಾಗಾಗಿ, ಒಂದು ಸಭೆಯಾಗಿ ನಮ್ಮ ಪ್ರತಿಕ್ರಿಯೆಯು "ದೇವರೇ, ನಮಗೆ ಒಂದು ಸಾಮಾನ್ಯವಾದ ಉದ್ದೇಶವಿದೆ ಎಂಬದಾಗಿರಬೇಕು. ನೀನು ಹೆಚ್ಚೆಚ್ಚಾಗಿ ನಮಗೆ ಬೇಕು ಮತ್ತು ಇದರಲ್ಲಿ ನಾವೆಲ್ಲರೂ ಒಟ್ಟಾಗಿ ಸಂಪೂರ್ಣವಾಗಿದ್ದೇವೆ ಎಂಬದಾಗಿರಬೇಕು!" ಹೇಗಿದ್ದರೂ ನಮ್ಮನ್ನೆ ನಾವು ಸ್ವಾರ್ಥದ ಉದ್ದೇಶ, ಅನುಮಾನ, ಮತ್ತು ಸ್ಪರ್ಧೆಗೆ ವಿರುದ್ಧವಾಗಿ ಕಾಪಾಡಿಕೊಳ್ಳಬೇಕು. ಯಾಕೆಂದರೆ ಒಂದು ವೇಳೆ ಅಲ್ಲಿ ಸ್ವಾರ್ಥದ ಉದ್ದೇಶವಿದ್ದರೆ, ಅದು ಅನುಮಾನಕ್ಕೆ ನಡೆಸುತ್ತದೆ, ಮತ್ತು ಅನುಮಾನವು ಸ್ಪರ್ಧೆಗೆ ನಡೆಸುತ್ತದೆ ಮತ್ತು ಸ್ಪರ್ಧೆಯು ದೊಡ್ಡ ವಿಭಜನೆಗೆ ನಡೆಸುತ್ತದೆ. ಈ ರೀತಿಯಾದಂತಹ ಭಾವನೆಗಳಿಗೆ ಅಲ್ಲಿ ಯಾವುದೇ ಸ್ಥಳ, ಯಾವುದೇ ಪ್ರವೇಶಕ್ಕೆ ಅನುಮತಿಯಿರಕೂಡದು ಯಾಕೆಂದರೆ ನಾವು ಒಗ್ಗಟ್ಟಾಗಿದ್ದೇವೆ; ನಾವು ಒಂದೇ ಉದ್ದೇಶದಿಂದ ಒಂದೇ ಒಪ್ಪಂದದಲ್ಲಿದ್ದೇವೆ—**ನಮಗೆ ದೇವರು ಹೆಚ್ಚೆಚ್ಚಾಗಿ ಬೇಕು!**

## "ಇದೇ" "ಅದು" ಆಗಿದೆ

**ಅಪೊಸ್ತಲ ಕೃತ್ಯಗಳು 2:1-4**

**1 ಪಂಚಾಶತ್ತಮ ದಿನದ ಹಬ್ಬವು ಬಂದಿರಲಾಗಿ ಅವರೆಲ್ಲರು ಏಕಮನಸ್ಸಿನಿಂದ ಒಂದೇ ಸ್ಥಳದಲ್ಲಿ ಕೂಡಿದ್ದರು.**

**2 ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ದವುಂಟಾಗಿ ಅವರು ಕೂತಿದ್ದ ಮನೆಯನ್ನೆಲ್ಲಾ ತುಂಬಿಕೊಂಡಿತು.**

**3 ಅದಲ್ಲದೆ ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡವು.**

**4 ಆಗ ಅವರೆಲ್ಲರು ಪವಿತ್ರಾತ್ಮಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು.**

"ಪಂಚಾಶತ್ತಮ ದಿನದ ಹಬ್ಬವು ಬಂದಿರಲಾಗಿ ಅವರೆಲ್ಲರು ಏಕಮನಸ್ಸಿನಿಂದ

ಒಂದೇ ಸ್ಥಳದಲ್ಲಿ ಕೂಡಿದ್ದರು ಮತ್ತು ಫಕ್ಕನೆ ..." (ಅಪೋಸ್ತಲರ ಕೃತ್ಯಗಳು 2:1,2ಅ). ಅವರು ಉದ್ದೇಶದ ಐಕ್ಯತೆದೊಂದಿಗೆ ಮುಂದುವರೆಯುತ್ತಿದ್ದಾರೆ ಎಂಬದನ್ನು ಗಮನಿಸಿರಿ. ಅವರು ಒಂದು ಒಪ್ಪಂದದೊಂದಿಗೆ ಒಂದು ಸ್ಥಳದಲ್ಲಿದ್ದರು ಮತ್ತು ತಕ್ಷಣ ಆಕಾಶ ತೆರೆಯಲ್ಪಟ್ಟಿತು ಮತ್ತು ದೇವರು ಬೆಂಕಿಯನ್ನು ಅವರ ಮೇಲೆ ಬಿಡುಗಡೆ ಮಾಡಿದನು. ಅದಷ್ಟೇ—ಸುರಿಸುವಿಕೆ ಪ್ರಾರಂಭವಾಗಿತ್ತು! ಇದು ಸಂಭವಿಸುವದು ಎಂದು ಯೇಸು ವಾಗ್ದಾನ ಮಾಡಿದ್ದನು ಮತ್ತು ಅದು ಪ್ರಾರಂಭವಾಗಿತ್ತು.

ಪಂಚಶತ್ತಮ ದಿನವನ್ನು ಆಚರಿಸಲು ಯೆರುಸಲೇಮಿನಲ್ಲಿ ಸಾವಿರಾರು ಯೆಹೂದ್ಯರು ಕೂಡಿ ಬಂದಿದ್ದರು. ನೂರಾರು ಸಾವಿರಾರೂ ಯೆಹೂದ್ಯ ಜನರು ಕೂಡಿದ್ದಿರಬಹುದೆಂಬ ಲೆಕ್ಕ ಚರಿತ್ರಾಕಾರರು ಹೇಳುತ್ತಾರೆ. ಮತ್ತು ಅನಂತರ, ಮೇಲಿನ ಕೋಣೆಯಲ್ಲಿದ್ದ 120 ಮಂದಿ ಶಿಷ್ಯರೊಳಗೆ ಅಸಾಧಾರಣಕರವಾದದ್ದೇನೋ ಒಂದು ಸಂಭವಿಸಿತು. ಅವರು ಅನ್ಯ ಭಾಷೆಯಲ್ಲಿ ಮಾತನಾಡ ತೊಡಗಿದರು ಮತ್ತು ಸುದ್ದಿಯು ಎಲ್ಲಾ ಕಡೆ ಹರಡಿರಬಹುದು. ಸ್ವಲ್ಪ ಹೊತ್ತಿನಲ್ಲೇ, ಈ ಎಲ್ಲಾ ಜನರು ಅನ್ಯ ಭಾಷೆಯಲ್ಲಿ ಪ್ರಾರ್ಥಿಸುತ್ತಾ ಮತ್ತು ಘನಪಡಿಸುತ್ತಾ ಇರುವದನ್ನು ಕಂಡು ಮತ್ತು ಕೇಳಿದ ದೊಡ್ಡ ಜನರ ಗುಂಪು ಹೊರಗಡೆ ಸೇರಿದರು. ನಂತರ ಪೇತ್ರನು ಜನರಿಗೆ ಏನಾದರು ವಿವರಿಸುವ ಅಗತ್ಯವನ್ನು ಮನಗಂಡನು ಮತ್ತು ಎದ್ದು ನಿಂತುಕೊಂಡು ಹೇಳಿದನು, "ಇದು ಪ್ರವಾದಿಯಾದ ಯೋವೇಲನ ಮೂಲಕವಾಗಿ ಹೇಳಿಸಿದ *ಸಂಗತಿ:*" (ಅಪೋಸ್ತಲರ ಕೃತ್ಯಗಳು 2:16). "ಇದೇ ಅದು," ಎಂದು ಹೇಳುವದರ ಮೂಲಕ, ಪೇತ್ರನು ಪವಿತ್ರಾತ್ಮನ ಪ್ರೇರೇಪಣೆಯ ಅಡಿಯಲ್ಲಿ ಹೇಳಿದ್ದೇನಂದರೆ ಯೆರುಸಲೇಮಿನಲ್ಲಿ ಅಂದು ಸಂಭವಿಸಿಸುತ್ತಾ ಇದ್ದದ್ದು ಹಳೇ ಒಡಂಬಡಿಕೆಯಲ್ಲಿ ಯೋವೇಲನು ಪ್ರವಾದಿಸಿದ್ದಾಗಿದೆ.

**ಯೋವೇಲ 2:28,29**

**28 ತರುವಾಯ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು;**
**ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು;**
**ನಿಮ್ಮ ಹಿರಿಯರಿಗೆ ಕನಸುಗಳು ಬೀಳುವವು,**
**ನಿಮ್ಮ ಯೌವನಸ್ಥರಿಗೆ ದಿವ್ಯದರ್ಶನಗಳಾಗುವವು;**
**29 ಇದಲ್ಲದೆ ಆ ದಿನಗಳಲ್ಲಿ ನನ್ನ ದಾಸದಾಸಿಯರ ಮೇಲೆಯೂ ನನ್ನ ಆತ್ಮವನ್ನು ಸುರಿಸುವೆನು.**

ಈಗ ಪೇತ್ರನು ವಾಸ್ತವಿಕವಾಗಿ ಏನು ಹೇಳಿದನು ? ಅವನು ಹೇಳಿದ್ದು, "ಇದೇ ಅದು !" ಆದರೆ ಒಂದು ವೇಳೆ ವಾಕ್ಯವನ್ನು ನಾವು ನೋಡುವಾಗ "ಇದು" "ಅದು" **ಅಲ್ಲಾ** ಎಂದು ನಾವು ತೀರ್ಮಾನ ಮಾಡುತ್ತೇವೆ ಏಕೆ ? ಯಾಕೆಂದರೆ ಯೋವೇಲ "*ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು; ನಿಮ್ಮ ಹಿರಿಯರಿಗೆ*

ಕನಸುಗಳು ಬೀಳುವವು, ನಿಮ್ಮ ಯೌವನಸ್ಥರಿಗೆ ದಿವ್ಯದರ್ಶನಗಳಾಗುವವು" (ಯೋವೇಲ 2:28) ಎಂದು ಹೇಳಿದ್ದನು. ಆದರೆ 120 ಮಂದಿ ಏನು ಮಾಡುತ್ತಿದ್ದರು ? ಅಲ್ಲಿ ಯಾವ ದರ್ಶನವೂ, ಕನಸುಗಳೂ, ಪ್ರವಾದನೆಗಳೂ ಅವರ ಮಧ್ಯದಲ್ಲಿ ಇರಲಿಲ್ಲ. ಬದಲಾಗಿ, ಅಲ್ಲಿ ಸಂಭವಿಸಿದ್ದೇನಂದರೆ ದೊಡ್ಡ ಬಿರುಗಾಳಿ ಬೀಸುತ್ತದೋ ಎಂಬ ಒಂದು ಶಬ್ಧ, ಬೆಂಕಿಯಂತಿದ್ದ ನಾಲಿಗೆಗಳು, ಮತ್ತು ಜನರು ಅನ್ಯ ಭಾಷೆಯಲ್ಲಿ ಮಾತನಾಡುತ್ತಿದ್ದರು. (ಅಪೋಸ್ತಲ ಕೃತ್ಯಗಳು 2:2-4) ಹಾಗಾಗಿ "ಇದು" ವಾಸ್ತವಿಕವಾಗಿ "ಅದು" ಅಲ್ಲ ! ನಾನು ವ್ಯಾಖ್ಯಾನಶಾಸ್ತ್ರವನ್ನು ಬೋಧಿಸುವಾಗ—ದೇವರ ವಾಕ್ಯಗಳನ್ನು ಸರಿಯಾಗಿ ಹೇಗೆ ಅರ್ಥವಿವರಣೆ ಮಾಡಬೇಕು—ನಾನು ನನ್ನ ವಿಧ್ಯಾರ್ಥಿಗಳಿಗೆ ಎಚ್ಚರಿಕೆಯಿಂದ ಗ್ರೀಕ್ ಭಾಷೆ, ಇತಿಹಾಸ, ಆಗಿನ ಕಾಲದ ಸಂಸ್ಕೃತಿ ಮುಂತಾದವುಗಳನ್ನು ಅಧ್ಯಯನ ಮಾಡಬೇಕೆಂದು ಹೇಳುತ್ತೇನೆ. ಹಾಗಾಗಿ ನನ್ನ ಪ್ರಾಕೃತ ಮನಸ್ಸಿನಿಂದ ಏನಾಗುತ್ತಿದೆ ಎಂದು ವಿಶ್ಲೇಶಿಸುವದಾದರೆ ನನ್ನ ತೀರ್ಮಾನವು "ಇದು ಅದಲ್ಲ!" ಎಂಬದಾಗಿರುತ್ತದೆ. ಯೋವೇಲನು "ದೊಡ್ಡ ಬಿರುಗಾಳಿ ಬೀಸುವ ಶಬ್ಧದ" (ಅಪೋಸ್ತಲ ಕೃತ್ಯಗಳು 2:2) ಬಗ್ಗೆ ಮಾತನಾಡಲಿಲ್ಲ, ಯೋವೇಲನು "ಬೆಂಕಿಯ ನಾಲಿಗೆಗಳ" ಅಥವಾ "ಅನ್ಯಭಾಷೆಗಳ" ಬಗ್ಗೆ ಸಹ ಪ್ರವಾದಿಸಲಿಲ್ಲ. (ಅಪೋಸ್ತಲ ಕೃತ್ಯಗಳು 2:3,4) ಪಂಚಶತ್ತಮ ದಿನದಂದು ನಡೆದ ಚಿಹ್ನೆಗಳು ಯೋವೇಲನ ಪ್ರವಾದನೆಯಲ್ಲಿರಲಿಲ್ಲ. ಆದರೆ ಪ್ರವಿತ್ರಾತ್ಮನು ಪೇತ್ರನ ಮೂಲಕವಾಗಿ "ಇದೇ ಅದು" ಎಂಬದ್ದಾಗಿ ಹೇಳುತ್ತಾ ಇದ್ದನು. ಇದರ ಕುರಿತು ನನ್ನ ಬೌದ್ಧಿಕ ವಿಶ್ಲೇಷಣೆಯ ತೀರ್ಮಾನ ಹೊರಬಿದ್ದಿದೆ!

ಇಲ್ಲಿ ನಾವು ಮಾಡಬೇಕಾದಂತಹ ಎರಡು ಪ್ರಾಮುಖ್ಯವಾದ ಕಡತಗಳಿವೆ.

## *ದೇವರು ತನ್ನ ವಾಕ್ಯಗಳಿಗಿಂತ ದೊಡ್ಡವನು*

ಮೊದಲನೆಯದಾಗಿ, ದೇವರು ತನ್ನ ವಾಕ್ಯಗಳಿಗಿಂತ—ಸತ್ಯವೇದಕ್ಕಿಂತ ದೊಡ್ಡವನಾಗಿದ್ದಾನೆ. ನಾವು ಅನೇಕಾವರ್ತಿ ದೇವರನ್ನು ಆತನ ವಾಕ್ಯದೊಳಗೆ ಸೇರಿಸಲು ಪ್ರಯತ್ನಿಸುತ್ತೇವೆ. ದೇವರು ತಾನು ಬರೆದ ಪುಸ್ತಕಕ್ಕಿಂತ ದೊಡ್ಡವನು. ಆತನು ಬರೆದ ಪುಸ್ತಕ ತನ್ನ ಬಗ್ಗೆ ವಿವರಿಸುವ ಒಂದು ಸಣ್ಣ ತುಂಡಾಗಿದೆ, ಒಬ್ಬ ಅನಂತ ದೇವರು. ಸತ್ಯವೇದವು ಸಂಪೂರ್ಣವಾದದ್ದು, ದೈವ ಪ್ರೇರಿತವಾದದ್ದು, ಮತ್ತು ಭೂಮಿಯ ಮೇಲಿನ ನಮ್ಮ ಜೀವಿತಕ್ಕೆ ಅಂತಿಮ ಅಧಿಕಾರ ಎಂಬದಾಗಿ ನಾನು ನಂಬುತ್ತೇನೆ. ನಮ್ಮ ಅನಂತ ದೇವರನ್ನು ಸತ್ಯವೇದವು ಸಂಪೂರ್ಣವಾಗಿ ವಿವರಿಸುವದಿಲ್ಲ ಎಂದು ನನಗೆ ತಿಳಿದಿದೆ. ದೇವರು ಎಂದಿಗೂ ತನ್ನ ವಾಕ್ಯಗಳನ್ನು ವಿರೋಧಿಸುವದಿಲ್ಲ; ತಾನು ಪ್ರಕಟಿಸಿದ ಸಂಗತಿಗಳಿಗೆ ಆತನು ಯಾವಾಗಲೂ ನಿಜವಾಗಿ ನಿಂತುಕೊಳ್ಳುತ್ತಾನೆ. ಆದರೆ ಆತನು ಬರೆಯಲ್ಪಟ್ಟ ವಾಕ್ಯಗಳಿಗಿಂತ ಅನಂತವಾಗಿ ದೊಡ್ಡವನಾಗಿದ್ದಾನೆ!

ಕೆಲವೊಮ್ಮೆ, "ಇದು" "ಅದಲ್ಲ" ಎಂಬದಾಗಿ ವಾಕ್ಯಗಳನ್ನು ನಾವು ವಿಶ್ಲೇಷಿಸುವಾಗ, ದೇವರು ಹೇಳುತ್ತಾನೆ, "ಇದು" "ಅದಾಗಿದೆ." ಯಾಕೆಂದರೆ ಯೋವೇಲನು ಪವಿತ್ರಾತ್ಮನ ಕಾರ್ಯಗಳ ಕುರಿತು ಮಾತನಾಡುವಾಗ, ಅವನು ಪವಿತ್ರಾತ್ಮನ ಎಲ್ಲಾ ಕಾರ್ಯಗಳ ಸಮಗ್ರ ಪಟ್ಟಿಯನ್ನು ಕೊಡುತ್ತಾ ಇಲ್ಲ, ಅವನು ಕೇವಲ ದರ್ಶನಗಳು, ಪ್ರವಾದನೆಗಳು ಮತ್ತು ಕನಸುಗಳ—ಪ್ರತಿನಿಧಿತ್ವದ ಪಟ್ಟಿಯನ್ನು ಕೊಟ್ಟನು. ಮತ್ತು ಪಂಚಶತ್ತಮ ದಿನದಲ್ಲಿ ನಡೆದ ಸಂಗತಿಗಳು ಸಹ ಪವಿತ್ರಾತ್ಮನ ಕಾರ್ಯವಾಗಿದೆ—ಕೆಲವು ಇತರ ಕಾರ್ಯಗಳಾಗಿವೆ—ದೊಡ್ಡ ಬಿರುಗಾಳಿ ಬೀಸುವ ಶಬ್ಧ, ಬೆಂಕಿಯ ನಾಲಿಗೆಗಳು, ಮತ್ತು ಅನ್ಯ ಭಾಷೆಯಲ್ಲಿ ಮಾತನಾಡುವದು. ಅವುಗಳು ಇನ್ನೂ ಆತ್ಮನ ಕಾರ್ಯಗಳಾಗಿವೆ. ಹಾಗಾಗಿ "ಇದು" "ಅದಾಗಿದೆ." ಆಮೆನ್!

ಉಜ್ಜೀವನದಲ್ಲಿ, ನಾವು ಬುದ್ಧಿವಂತಿಕೆ ಮತ್ತು ಪ್ರಕಟಣೆಯೊಂದಿಗೆ ನಡೆಯಲೇ ಬೇಕು. ನಮಗೆ ಎರಡೂ ಬೇಕು. ಕೆಲವೊಮ್ಮೆ, ನಾವು ಬುದ್ಧಿವಂತಿಕೆಯಿಂದ ಮಾತ್ರ ನಡೆಯುತ್ತೇವೆ ಆದರೆ ಪ್ರಕಟಣೆಯೊಂದಿಗೆ ಅಲ್ಲ. ನಮಗೆ ವಾಕ್ಯಗಳ ಇತಿಹಾಸವೆಲ್ಲಾ ಗೊತ್ತಿರುತ್ತದೆ—ಇಬ್ರಿಯ ಭಾಷೆ, ಗ್ರೀಕ್ ಭಾಷೆ ಮತ್ತು ಇತರ ಉಳಿದ ಎಲ್ಲವುಗಳು. ನಮಗೆ ಅನೇಕಾವರ್ತಿ "ಸರಿಯಾದ ವಿಷಯ" ಏನೆಂದು ತಿಳಿದಿರುತ್ತದೆ, ಆದರೆ ದೇವರ "ಈಗಿನ ವಿಷಯ" ದ ಪ್ರಕಟಣೆ ನಮಗಿರುವದಿಲ್ಲ. ಹಾಗಾಗಿ, ನಮಗೆ "ಸರಿಯಾದ ವಿಷಯ" ವಿದೆ ಅದು ದ್ರಾಕ್ಷೆಯ ಬುದ್ದಲಿ, ಆದರೆ "ಈಗಿನ ವಿಷಯ" ಹೊಸ ದ್ರಾಕ್ಷಾರಸವಾಗಿದೆ. ನಮ್ಮ ದ್ರಾಕ್ಷಾ ಬುದ್ದಲಿಗಳು ಹೊಸ ದ್ರಾಕ್ಷಾರಸವನ್ನು ಹೊಂದಿರದಿದ್ದರೆ, ನಾವು ಹೊಸ ದ್ರಾಕ್ಷಾರಸವನ್ನು ಹೊಂದಿಕೊಳ್ಳುವದಿಲ್ಲ. ದೇವರು "ಈಗ" ಏನು ಮಾಡುತ್ತಿದ್ದಾನೆಂಬದನ್ನು ಗ್ರಹಿಸಿ ಅದನ್ನು ಸ್ವಾಗತಿಸಲು ಮತ್ತು ಅದರಲ್ಲಿ ನಡೆಯಲು ನಮಗೆ ಬುದ್ಧಿವಂತಿಕೆ ಮತ್ತು ಪ್ರಕಟಣೆಯ ಅಗತ್ಯವಿದೆ. "ಈಗ" ಎಂಬ ಪದ ಖಂಡಿತವಾಗಲೂ ಯಾವತ್ತೂ ಬರೆಯಲ್ಪಟ್ಟ ವಾಕ್ಯಗಳನ್ನು ವಿರೋಧಿಸುವದಿಲ್ಲ, ಆದರೆ ದೇವರು ಏನು ಮಾಡುತ್ತಿದ್ದಾನೆ ಎಂಬದನ್ನು ಅರ್ಥ ಮಾಡಿಕೊಳ್ಳಲು "ಈಗ" ಎಂಬ ಪದ ನಾವು ಹೊಂದಿರಬೇಕು.

### *ಉಜ್ಜೀವನಗಳು ಅಥವಾ ಸುರಿಸುವಿಕೆಗಳು ಒಂದೇ ರೀತಿಯಿಲ್ಲದಿರಬಹುದು*

ಪೇತ್ರನ "ಇದು ಅದು" ಹೇಳಿಕೆಯನ್ನು ಆಧರಿಸಿ ನಾವು ಹೇಳಬೇಕಾದ ಎರಡನೇಯ ಪ್ರಾಮುಖ್ಯವಾದ ವಿಷಯವೇನೆಂದರೆ ಯಾವುದೇ ಎರಡು ಉಜ್ಜೀವನಗಳು ಅಥವಾ ಸುರಿಸುವಿಕೆಗಳು ಒಂದೇ ರೀತಿ ಇರುವದಿಲ್ಲ! ಅಲ್ಲಿ ಹೋಲಿಕೆಗಳಿರಬಹುದು, ಆದರೆ ಅವು ಒಂದೇ ಆಗಿರುವದಿಲ್ಲ. ಯೋವೇಲನು ದೇವರ ಆತ್ಮನ ಒಂದು ಸುರಿಸುವಿಕೆಯ ಬಗ್ಗೆ ವಿವರಿಸಿದನು. ಪಂಚಶತ್ತಮ ದಿನದಂದು ಸಂಭವಿಸಿದ್ದೇನೆಂದರೆ ದೇವರ ಆತ್ಮನ ಒಂದು ನಿಜವಾದ ಸುರಿಸುವಿಕೆ. "ಇದು ಒಂದು ಸುರಿಸುವಿಕೆ; ಇದು ಒಂದು ಸಂದರ್ಶನ" ಎಂಬದಾಗಿ ದೇವರು

ಹೇಳಬಹುದು, "ಆದರೆ ಇದು ನಿಖರವಾಗಿ ಅದರ ಹಾಗೆ ಕಾಣಿಸುತ್ತಿಲ್ಲ ಎಂದು ನಾವು ಹೇಳಬಹುದು!" ಉಜ್ಜೀವನಗಳ ಇತಿಹಾಸ, ಪಾಠಗಳನ್ನು ಕಲಿಯಬಹುದು, ಉಜ್ಜೀವನದ ಸುಗ್ಗಿಯ ಮಾದರಿಗಳನ್ನು ನಾವು ಅಧ್ಯಯನ ಮಾಡಬಹುದು ಆದರೆ ದೇವರನ್ನು ಒಂದು ಪೆಟ್ಟಿಗೆಯೊಳಗೆ ಹಾಕಲು ಸಾಧ್ಯವಿಲ್ಲ ಮತ್ತು ಬೇರೆ ಯಾವುದೋ ಸ್ಥಳದಲ್ಲಿ ಸಂಭವಿಸಿದ ಮಾದರಿಯಲ್ಲೇ ಉಜ್ಜೀವನ ಆಗಬೇಕೇಂದು ಹೇಳಲು ಸಾಧ್ಯವಿಲ್ಲ. ನಾವು ದೇವರ ಸುರಿಸುವಿಕೆಯೊಳಗೆ ಪ್ರಗತಿಯಲ್ಲಿರುವಾಗ ನಾವು ದೇವರಿಗೆ ಬಹಳವಾಗಿ ತೆರೆದವರಾಗಿರಬೇಕು. ದೇವರು ಈಗ ನಮ್ಮ ಮಧ್ಯದಲ್ಲಿ ಏನು ಮಾಡಲು ಇಚ್ಛಿಸುತ್ತಾನೆ ಎಂದು ನಾವು ಅರ್ಥಮಾಡಿಕೊಳ್ಳಬೇಕು. "ದೇವರು ನಮ್ಮನ್ನು ಒಂದು ಸಭೆಯಾಗಿ ಯಾವುದರೊಳಗೆ ನಡೆಸುತ್ತಿದ್ದಾನೆ? ಈ ಒಂದು ಪಟ್ಟಣದ ಬಗ್ಗೆ ದೇವರ ಬಯಕೆ ಏನು?" ಎಂಬಂತಹ ಪ್ರಶ್ನೆಗಳನ್ನು ನಮಗೆ ನಾವೇ ಕೇಳಿಕೊಳ್ಳಬೇಕು. ನಮ್ಮ ಪಟ್ಟಣದಲ್ಲಿನ ಉಜ್ಜೀವನವು ಪ್ರಪಂಚದೊಳಗೆ ಎಲ್ಲೋ ಬೇರೊಂದೆಡೆ ದೇವರು ಕಾರ್ಯ ಮಾಡಿದ ಉಜ್ಜೀವನದ ನಿಖರ ಪ್ರತಿರೂಪವಾಗಿರುವದಿಲ್ಲ. ಇದು ಇನ್ನೂ ಹೊಚ್ಚ ಹೊಸದಾದ ಒಂದು ಉಜ್ಜೀವನ, ದೇವರ ಒಂದು ಸಂದರ್ಶನ, ಪರಲೋಕದಿಂದ ಒಂದು ಸುರಿಸುವಿಕೆಯಾಗಿರುತ್ತದೆ!

ಅಪೋಸ್ತಲರ ಕೃತ್ಯಗಳು 2 ರಲ್ಲಿರುವ ದಾಖಲೆಗಳಿಂದ, ಈ ಒಂದು ಸುರಿಸುವಿಕೆಯ ಕಾರಣದಿಂದ ಸಭೆಯು ಜನಿಸಿತು ಎಂಬದನ್ನು ನಾವು ಕಾಣುತ್ತೇವೆ! ವಾಸ್ತವವಾಗಿ ಇದು ಮೊಟ್ಟಮೊದಲ ಸ್ಥಳೀಯ ಸಭೆಯಾಗಿತ್ತು.

**ಅಪೋಸ್ತಲರ ಕೃತ್ಯಗಳು 2:41**
**ಅವನ ಮಾತಿಗೆ ಒಪ್ಪಿಕೊಂಡವರು ದೀಕ್ಷಾಸ್ನಾನ ಮಾಡಿಸಿಕೊಂಡರು. ಆ ದಿವಸ ಸುಮಾರು ಮೂರುಸಾವಿರ ಜನರು ಅವರಲ್ಲಿ ಸೇರಿದರು.**

ರಾತ್ರೋರಾತ್ರಿ, 3000 ಜನರ ಒಂದು ಸಭೆ ಜೀವಂತವಾಯಿತು! ಅನೇಕಾವರ್ತಿ, ಅದು ಹೇಗೆ ಇದ್ದಿರಬಹುದೆಂದು ನಾನು ಊಹಿಸಿಕೊಳ್ಳುತ್ತೇನೆ—ಆಗ ಇದ್ದಂತಹ ಅಪೋಸ್ತಲರ ಪರಿಸ್ಥಿತಿಯಲ್ಲಿ ಇದ್ದರೆ ಹೇಗೆ ಅನ್ನಿಸುತ್ತಿತ್ತು! ಅವರು ಯಾವುದೇ ಸತ್ಯವೇದ ಶಾಲೆಯಿಂದ ಪದವಿ ಪಡೆದಿರಲಿಲ್ಲ, "ಸಭಾ ನಿರ್ವಹಣೆಯ," "ಸಭಾ ಬೆಳವಣಿಗೆಯ ತತ್ವಗಳ" ಬಗ್ಗೆ ಸೂಚನೆಗಳನ್ನು ಹೊಂದಿರಲಿಲ್ಲ, ಏನೂ ಇರಲಿಲ್ಲ, ಆದರೂ, ರಾತ್ರೋರಾತ್ರಿ ಅವರು 3000 ಜನರ ಒಂದು ಸಭೆಯನ್ನು ಹೊಂದಿದ್ದರು! ಅಲ್ಲಿ ಯಾವುದೇ ಯೋಜನೆಗಳಿರಲಿಲ್ಲ, ಯಾವುದೇ ತಂತ್ರಗಳಿರಲಿಲ್ಲ, ಯಾವುದೇ ಪೂರ್ವ ಸೂಚನೆಗಳಿರಲಿಲ್ಲ, ಅನುಸರಿಸಲು ಯಾವುದೇ ಮಾದರಿಯಿರಲಿಲ್ಲ, G12-ಕೇರ್ ಸೆಲ್ ಗುಂಪುಗಳಿರಲಿಲ್ಲ—ಏನೂ ಇರಲಿಲ್ಲ—ಆದರೆ ಒಂದೇ ಕ್ಷಣದಲ್ಲಿ ಸಭೆಯೊಂದು ಜನಿಸಿತು!

ನಾನು ಕಲಿಯುವಿಕೆ, ಅಥವಾ ಯೋಜನೆ ಅಥವಾ ತಂತ್ರದ ಪ್ರಾಮುಖ್ಯತೆಯನ್ನು ಕಡಿಮೆ ಮಾಡುತ್ತಿಲ್ಲ. ನಾನು ನಮ್ಮ ಹೃದಯದಲ್ಲಿ ಪ್ರಭಾವ ಬೀರಲು ಪ್ರಯತ್ನಿಸುತ್ತಿರುವದೇನಂದರೆ ಇದು—"ದೇವರು ಅನಿರೀಕ್ಷಿತವಾಗಿ ಏನಾದರೂ ಮಾಡಿದರೆ, ನಾವು ಅದರೊಂದಿಗೆ ಹೋಗೋಣ!" ದೇವರು ಯಾವಾಗಲೂ ನಮ್ಮ ಯೋಜನೆ ಮತ್ತು ನಮ್ಮ ಉತ್ತಮ ಕಾರ್ಯತಂತ್ರದ ಮೂಲಕ ಬರಬೇಕಾಗಿಲ್ಲ! ವಿಧ್ಯಾವಂತ ಜನರಾಗಿ, ನಮ್ಮ ಮೆದುಳನ್ನು ಹೆಚ್ಚಾಗಿ ಉಪಯೋಗಿಸಿದ್ದೇವೆ ಮತ್ತು ಅಲ್ಲಿ ದೇವರು ಏನು ಮಾಡುತ್ತಿದ್ದಾನೆ ಎಂಬದನ್ನು ಅರ್ಥಮಾಡಿಕೊಳ್ಳಲು ನಮ್ಮಲ್ಲಿ ಹೆಚ್ಚಿನವರಿಗೆ ಅಲ್ಲಿ ಹೋರಾಟ ಪ್ರಾರಂಭವಾಗುತ್ತದೆ. ದೇವರು ಅನಿರೀಕ್ಷಿತವಾಗಿ ಏನಾದರೂ ಮಾಡಲು ಹೋದರೆ, ನಾವು ಅದರೊಂದಿಗೆ ಹೋಗೋಣ!

# 2
# ಉಜ್ಜೀವನದಲ್ಲಿರುವ ಒಂದು ಸಭೆ

ಯೆರುಸಲೇಮಿನಲ್ಲಿದ್ದ ಸಭೆಯು ಉಜ್ಜೀವನದ ಮೂಲಕ ಜನಿಸಿತು. ಹಾಗಾಗಿ, ಇದು ಉಜ್ಜೀವನದಲ್ಲಿರುವ ಸಭೆ ಹೇಗೆ ಕಾಣಿಸುತ್ತದೆ ಎಂದು ನಮಗೆ ಅರ್ಥ ಮಾಡಿಕೊಳ್ಳಲು ಮೂಲಮಾದರಿಯಾಗಿ ಕಾರ್ಯ ನಿರ್ವಹಿಸುತ್ತದೆ. ನಾವು ಸುರಿಸುವಿಕೆಯನ್ನು ಹೊಂದಿಕೊಳ್ಳುವಾಗ ಮತ್ತು ಉಜ್ಜೀವನವನ್ನು ಅನುಭವಿಸುವಾಗ ಏನನ್ನು ನಿರೀಕ್ಷಿಸಬಹುದು ಎಂಬ ಕೆಲವು ಪಾಠಗಳನ್ನು ನಾವು ಕಲಿಯಲಿಕ್ಕಿದ್ದೇವೆ. ಅಪೋಸ್ತಲ ಕೃತ್ಯಗಳ ಮೊದಲ ಎಂಟು ಅಧ್ಯಾಯಗಳು ಯೆರುಸಲೇಮಿನಲ್ಲಿದ್ದ ಸಭೆಯ ಮೊದಲ 12 ವರ್ಷಗಳನ್ನು ಸೆರೆಹಿಡಿಯುತ್ತದೆ.

## ಕರ್ತನು ಅವರ ಮಧ್ಯದಲ್ಲಿ ಏನು ಬಿಡುಗಡೆ ಮಾಡಲಿದ್ದನೋ ಅದರಲ್ಲಿ ಪ್ರತಿದಿನ ಮುಂದುವರೆದರು

**ಅಪೋಸ್ತಲರ ಕೃತ್ಯಗಳು 2:42-47**

**42ಇವರು ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿ ಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು.**
**43ಎಲ್ಲರಿಗೂ ಭಯ ಉಂಟಾಯಿತು, ಇದಲ್ಲದೆ ಅನೇಕ ಅದ್ಭುತಕಾರ್ಯಗಳೂ ಸೂಚಕಕಾರ್ಯಗಳೂ ಅಪೊಸ್ತಲರ ಕೈಯಿಂದ ನಡೆದವು.**
**44ನಂಬಿದವರೆಲ್ಲರು ಒಗ್ಗಟ್ಟಾಗಿದ್ದು ತಮ್ಮದೆಲ್ಲವನ್ನೂ ಹುದುವಾಗಿ ಅನುಭೋಗಿಸುತ್ತಾ**
**45ತಮ್ಮ ತಮ್ಮ ಚರಸ್ಥಿರಸೊತ್ತುಗಳನ್ನು ಮಾರಿ ಬಂದ ಹಣವನ್ನು ಎಲ್ಲರಿಗೂ ಅವರವರ ಅಗತ್ಯವಿದ್ದ ಹಾಗೆ ಹಂಚಿಕೊಡುತ್ತಾ ಇದ್ದರು.**
**46ಅವರು ದಿನಾಲು ಏಕಮನಸ್ಸಿನಿಂದ ದೇವಾಲಯದಲ್ಲಿ ಕೂಡುತ್ತಾ ಮನೆಮನೆಗಳಲ್ಲಿ ರೊಟ್ಟಿಮುರಿದು ಉಲ್ಲಾಸದಿಂದಲೂ ಸರಳ ಹೃದಯದಿಂದಲೂ ಊಟಮಾಡುತ್ತಾ ಇದ್ದರು;**
**47ದೇವರನ್ನು ಕೊಂಡಾಡುವವರಾಗಿಯೂ ಜನರೆಲ್ಲರ ದಯವನ್ನು ಹೊಂದುವವರಾಗಿಯೂ ಇದ್ದರು. ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಲಿಗೆ ಸೇರಿಸುತ್ತಿದ್ದನು.**

ದೇವರು ಅವರ ಮಧ್ಯದಲ್ಲಿ ಏನು ಬಿಡುಗಡೆ ಮಾಡಲಿದ್ದನೋ ಅದರಲ್ಲಿ ವಿಶ್ವಾಸಿಗಳು ಪ್ರತಿದಿನ ಮುಂದುವರೆದರು ಎಂಬದನ್ನು ನಾವು ಗಮನಿಸಬೇಕು.

**ಅಪೋಸ್ತಲರ ಕೃತ್ಯಗಳು 2:42**
**ಇವರು ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿ ಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು.**

**ಅಪೋಸ್ತಲರ ಕೃತ್ಯಗಳು 2:46**
**ಅವರು ದಿನಾಲು ಏಕಮನಸ್ಸಿನಿಂದ ದೇವಾಲಯದಲ್ಲಿ ಕೂಡುತ್ತಾ ಮನೆಮನೆಗಳಲ್ಲಿ ರೊಟ್ಟಿಮುರಿದು ಉಲ್ಲಾಸದಿಂದಲೂ ಸರಳ ಹೃದಯದಿಂದಲೂ ಊಟಮಾಡುತ್ತಾ ಇದ್ದರು;**

**ಅಪೋಸ್ತಲರ ಕೃತ್ಯಗಳು 5:42**
**ಹಿರೀಸಭೆಯ ಎದುರಿನಿಂದ ಹೊರಟುಹೋಗಿ ಪ್ರತಿದಿನ ಎಡೆಬಿಡದೆ ದೇವಾಲಯದಲ್ಲಿಯೂ ಮನೆಮನೆಯಲ್ಲಿಯೂ ಉಪದೇಶಮಾಡುತ್ತಾ ಕ್ರಿಸ್ತನಾದ ಯೇಸುವಿನ ವಿಷಯವಾದ ಶುಭವರ್ತಮಾನವನ್ನು ಸಾರುತ್ತಾ ಇದ್ದರು.**

ಯೆರುಸಲೇಮಿಗೆ ಒಂದು ಸಣ್ಣ ಪ್ರಯಾಣ ಯೋಜಿಸಿದ್ದ ಈ ಜನರು, ಇದ್ದಕ್ಕಿದ್ದಂತೆ ಪ್ರತಿದಿನ ನಡೆಯುತ್ತಿದ್ದ ಸಂಗತಿಯೊಳಗೆ ತಮ್ಮನ್ನು ತೊಡಗಿಸಿಕೊಂಡರು. ಇದು ನಾವು ಭಾನುವಾರದ ಆರಾಧನೆಗೆ ಹೋಗುವದು, ಬಹುಶಃ ಸಾಂದರ್ಭಿಕವಾಗಿ ಸಭೆಯಲ್ಲಿ ವಿಶೇಷ ಕೂಟಗಳಲ್ಲಿ ಹಾಜರಾಗುವದು, ಪ್ರಶಾಂತವಾದ ಜೀವಿತವನ್ನು ನಡೆಸುವದಕ್ಕೆ ನಾವು ಎಲ್ಲವನ್ನು ಅಲ್ಲಿ ಯೋಜಿಸಿದ ಹಾಗೆ ಇರುತ್ತದೆ. ಆದರೆ ಉಜ್ಜೀವನದಲ್ಲಿ, ಪ್ರತಿದಿನ ಏನಾದರೂ ನಡೆಯುತ್ತದೆ! ಕರ್ತನು ಅವರ ಮಧ್ಯದಲ್ಲಿ ಏನು ಮಾಡುತ್ತಿದ್ದನೋ ಅದರಲ್ಲಿ ಯೆರುಸಲೇಮಿನ ಸಭೆಯು ಪ್ರತಿದಿನ ಮುಂದುವರೆಯುತ್ತಾ ಇತ್ತು. "ಏಳು ದಿನಕ್ಕೊಮ್ಮೆ"—ಘಟನೆಯಾಗಿ ಅಲ್ಲ, ಅವರು ಪ್ರತಿದಿನ ಅದರೊಂದಿಗೆ ಹರಿಯುತ್ತಾ ಹೋಗುತ್ತಿದ್ದರು!

## ವೇಳಾಪಟ್ಟಿಗಳು ಮೂಲಭೂತವಾಗಿ ಪರಿಣಾಮ ಬೀರಿತು

ಅವರ ವೇಳಾಪಟ್ಟಿಗಳು ಮೂಲಭೂತವಾಗಿ ಪರಿಣಾಮ ಬೀರಿದನ್ನು ಊಹಿಸಿಕೊಳ್ಳುವದು ಬಹಳ ಸುಲಭ. ಉಜ್ಜೀವನದಲ್ಲಿ, ನಮ್ಮ ವೇಳಾಪಟ್ಟಿಗಳ ಮೇಲೆ ಪರಿಣಾಮ ಬೀರುತ್ತದೆ! ಅದು ಸ್ವಲ್ಪ "ಅಸ್ತವ್ಯಸ್ತ" ಸಹ ಆಗಬಹುದು. ಯೆರುಸಲೇಮಿನಲ್ಲಿದ್ದ ಜನರು ತಮ್ಮ ಪ್ರಯಾಣವನ್ನು ಮುಂಗಡವಾಗಿ ಯೋಜಿಸಿದ್ದಿರಬಹುದು—ಅವರು ಒಂದು ಮುಂಜಾನೆ ಪಂಚಶತ್ತಮ ಹಬ್ಬದಲ್ಲಿ ಇರುವದಕ್ಕೆ ಯೆರುಸಲೇಮಿಗೆ ಹೋಗಿದ್ದಿರಬಹುದು ಮತ್ತು ಮಾರನೇ ದಿನ ಹಿಂದಿರುಗಲು ಯೋಜಿಸಿದ್ದಿರಬಹುದು ಮತ್ತು ಬಹುಶಃ ಮರುದಿನ ಕೆಲಸದಲ್ಲಿ ಅವರು ಕಾಣಿಸಿಕೊಳ್ಳಲು ಯೋಜಿಸಿದ್ದಿರಬಹುದು!

ಇದನ್ನು ಪರಿಗಣಿಸಿರಿ—ಅವರು ಯೆರುಸಲೇಮಿಗೆ ಬಂದರು ಮತ್ತು ಅಲ್ಲಿ ದೇವರ ಬಲವಾದ ಸುರಿಸುವಿಕೆಯಿತ್ತು! ಅವರ ಜೀವಿತಗಳು ಸ್ಪರ್ಷಿಸಲ್ಪಟ್ಟಿತು ಮತ್ತು 3000 ಜನರು ರಕ್ಷಣೆ ಹೊಂದಿದರು! ಅವರ ವೇಳಾಪಟ್ಟಿಗಳು ಆಗ ಎಸೆಯಲ್ಪಟ್ಟವು! ಹಗಲು ಮತ್ತು ರಾತ್ರಿ ದೇವರನ್ನು ಹುಡುಕಲು ಮತ್ತು ಸ್ತುತಿಸಲು, ಏನೋ ಅವರನ್ನು ಆಲಯದ ಕಡೆಗೆ ಸೆಳೆಯುತ್ತಿತ್ತು. ಉಜ್ಜೀವನವು ಸ್ಫೋಟಗೊಳ್ಳುವಾಗ, ವೇಳಾಪಟ್ಟಿಗಳು ಬದಲಾಗುತ್ತವೆ.

ನಾವು ಕೆಲಸಕ್ಕೆ ಹೋಗಬಾರದೆಂದು ಇಲ್ಲಿ ನಾನು ಸಲಹೆ ನೀಡುತ್ತಿಲ್ಲ. ನಾನು ಹೇಳುತ್ತಿರುವದೇನೆಂದರೆ ನಮ್ಮ ವೇಳಾಪಟ್ಟಿಗಳನ್ನು ಬದಲಾಯಿಸುವ ಅಥವಾ ತಿದ್ದುವ ಸಂಗತಿಗಳು ಸಂಭವಿಸುತ್ತವೆ. ದೇವರು ನಮ್ಮ ಮಧ್ಯದಲ್ಲಿ ಚಲಿಸುವ ಕಾಲದಲ್ಲಿ ನಾವಿದ್ದೇವೆ ಎಂದು ತಿಳಿದುಕೊಂಡು ಉಜ್ಜೀವನದೊಳಗೆ ನಾವು ಬರಬೇಕು. ದೇವರು ಬಿಡುಗಡೆ ಮಾಡಲು ಬಯಸುವದನ್ನು ಹಿಂದಟ್ಟಲು ನಮ್ಮ ವೇಳಾಪಟ್ಟಿಗಳನ್ನು ಪುನಃ ಜೋಡಿಸಲು ನಾವು ಮನಸ್ಸುಳವರಾಗಿರಬೇಕು. "ನಮಗೆ ಉಜ್ಜೀವನ ಬೇಕು ದೇವರೆ. ಒಂದು ಸುರಿಸುವಿಕೆಯನ್ನು ಕಳುಹಿಸು, ಕರ್ತನೇ! ನಮಗೆ ಒಂದು ಸಂದರ್ಶನ ಕೊಡು ಕರ್ತನೇ!" ಎಂದು ನಮ್ಮಲ್ಲಿ ಅನೇಕರು ಪ್ರಾರ್ಥಿಸುತ್ತಿರಬಹುದು, ಆದರೆ ಒಂದು ವೇಳೆ ದೇವರು ''ಕಾಣಿಸಿಕೊಂಡು'' ನಮ್ಮ ವೇಳಾಪಟ್ಟಿಗಳನ್ನು ಬದಲಾಯಿಸುವದಾದರೆ, ''ನಮಗೆ ಉಜ್ಜೀವನ ಬೇಕು ಆದರೆ ನಮ್ಮ ವೇಳಾಪಟ್ಟಿಯನ್ನು ಅಥವಾ ನಮ್ಮ ಜೀವಿತವನ್ನು ಅಡ್ಡಿಪಡಿಸಬೇಡ, ಕರ್ತನೇ!" ಎಂದು ನಾವು ಹೇಳುತ್ತೇವಾ ಅಥವಾ ಉಜ್ಜೀವನಕ್ಕಾಗಿ ನಮ್ಮ ಪ್ರಾರ್ಥನೆಗಳಿಗೆ ದೇವರ ಉತ್ತರವನ್ನು ನಾವು ನಿಜವಾಗಲು ಸ್ವೀಕರಿಸಲು ಸಿದ್ಧರಿದ್ದೇವಾ?

## ಸಮುದಾಯದ ಪ್ರಜ್ಞೆ—ಒಟ್ಟಿಗೆ ಹಂಚಿಕೊಳ್ಳುವದು

**ಅಪೋಸ್ತಲರ ಕೃತ್ಯಗಳು 2:44,45**

**44 ನಂಬಿದವರೆಲ್ಲರು ಒಗ್ಗಟ್ಟಾಗಿದ್ದು ತಮ್ಮದೆಲ್ಲವನ್ನೂ ಹುದುವಾಗಿ ಅನುಭೋಗಿಸುತ್ತಾ**
**45 ತಮ್ಮ ತಮ್ಮ ಚರಸ್ಥಿರಸೊತ್ತುಗಳನ್ನು ಮಾರಿ ಬಂದ ಹಣವನ್ನು ಎಲ್ಲರಿಗೂ ಅವರವರ ಅಗತ್ಯವಿದ್ದ ಹಾಗೆ ಹಂಚಿಕೊಡುತ್ತಾ ಇದ್ದರು.**

ಈ ಒಂದು ಸುರಿಸುವಿಕೆಯಲ್ಲಿ ಯೆರುಸಲೇಮಿನಲ್ಲಿದ್ದ ಸಭೆ ಚಲಿಸುತ್ತಿದ್ದಾಗ ಅಲ್ಲಿ ಒಂದು ಆಳವಾದ ಸಮುದಾಯದ ಪ್ರಜ್ಞೆ—ಒಟ್ಟಾಗಿ ಹಂಚಿಕೊಳ್ಳುವದು ಇದ್ದದನ್ನು ನಾವು ನೋಡುತ್ತೇವೆ. ಇದ್ದಕ್ಕಿದ್ದಂತೆ ಅವರು ಒಟ್ಟಾಗಿ ಮಧ್ಯಾಹ್ನದ ಮತ್ತು ರಾತ್ರಿಯ ಊಟವನ್ನು ಮಾಡ ತೊಡಗಿದರು ಮತ್ತು ಬಹುಶಃ ಮುಂಚೆ ತಮಗೆ ಪರಿಚಯವಿಲ್ಲದ ವ್ಯಕ್ತಿಗಳ ಜೊತೆಗೆ ಪ್ರಯಾಣ ಮಾಡ ತೊಡಗಿದರು. ಅಲ್ಲಿ ಈ ಜನರ ಮಧ್ಯದಲ್ಲಿ ಒಂದು ಸಂಪೂರ್ಣವಾದ ಹೊಸ ಸಮುದಾಯದ ಪ್ರಜ್ಞೆ ಅನುಭವಿಸಿದರು. ಸತ್ಯವೇದವು ಹೇಳುತ್ತದೆ ತಮಗಿರುವದೆಲ್ಲವನ್ನು ಅವರು ಸಮವಾಗಿ ಹೊಂದಿದ್ದರು ಮತ್ತು ಸಂಗತಿಗಳನ್ನು ಹಂಚಿಕೊಳ್ಳಲು ಪ್ರಾರಂಭಿಸಿದರು. ಹಾಗಿದ್ದರೆ, ಉಜ್ಜೀವನವು ಏನು ಮಾಡುತ್ತದೆ? ಅದು ನಿಜವಾಗಲೂ ನಮ್ಮ ಜೀವಿತದೊಳಗೆ ಒಂದು ಸಮುದಾಯದ ಪ್ರಜ್ಞೆಯನ್ನು ಕಟ್ಟುವಂತದ್ದಾಗಿದೆ. ನಮ್ಮ ಪ್ರಯಾಣದಲ್ಲಿ ಹಂಚಿಕೊಳ್ಳಲು ಪ್ರಾರಂಭಿಸುತ್ತೇವೆ ಮತ್ತು ನಮ್ಮ ಕೊಡುವಿಕೆಯಲ್ಲಿ, ನಮ್ಮ ಸಹಾಯದಲ್ಲಿ, ನಮ್ಮ ಒಟ್ಟುಗೂಡೂವಿಕೆಯಲ್ಲಿ ಸಹಜತೆಯಿರುತ್ತದೆ.

## ಸಭೆಯ ತ್ವರಿತ ಬೆಳವಣಿಗೆ

ಯೆರುಸಲೇಮಿನಲ್ಲಿ ಸಭೆಯ ತ್ವರಿತ ಬೆಳವಣಿಗೆಯನ್ನು ಸಹ ನಾವು ನೋಡುತ್ತೇವೆ. "... ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು *ಅವರ ಮಂಡಲಿಗೆ ಸೇರಿಸುತ್ತಿದ್ದನು"* (ಅಪೋಸ್ತಲರ ಕೃತ್ಯಗಳು 2:47ಆ). ನಮಗೆ ಪ್ರತಿದಿನದ ನಿರ್ದಿಷ್ಟ ಸಂಖ್ಯೆ ಗೊತ್ತಿಲ್ಲ, ಆದರೆ ಒಂದು ವೇಳೆ 100 ಅಥವಾ 200, ಅಥವಾ ಕೇವಲ 10 ಆಗಿರಬಹುದು, ಆದರೆ ಪ್ರತಿದಿನ ಜನರು ಸೇರಿಸಲ್ಪಡುತ್ತಿದ್ದರು ಎಂದು ಸತ್ಯವೇದ ದಾಖಲು ಮಾಡುತ್ತದೆ. ಪೇತ್ರನ ಮೊದಲ ಪ್ರಸಂಗವಾದ ನಂತರ, ಒಂದೇ ದಿನದಲ್ಲಿ 3000 ಜನರು ಸೇರಿಸಲ್ಪಟ್ಟರು (ಅಪೋಸ್ತಲರ ಕೃತ್ಯಗಳು 2:41). ನಂತರ, ಕುಂಟನನ್ನು ಗುಣಪಡಿಸಿದ ಮೇಲೆ ಇನ್ನೂ 5000 ಸೇರಿಸಲ್ಪಟ್ಟರು (ಅಪೋಸ್ತಲರ ಕೃತ್ಯಗಳು 4:4). ನಿಜಕ್ಕೂ ಸ್ಫೋಟಕ ಸಭಾ ಬೆಳವಣಿಗೆ! ನಮ್ಮ ನಗರದ ಸಭೆಗಳಲ್ಲಿ ಇಂತಹ ಅದ್ಭುತ ಸಂಗತಿಗಳು ನಡೆಯುವದನ್ನು ನಾವು ಇಷ್ಟಪಡುವದಿಲ್ಲವೇ?

## ಸಭೆಯ ನಿರಂತರ ಬೆಳವಣಿಗೆಗೆ ಕಾರಣವಾದ ಗಮನಾರ್ಹ ಅದ್ಭುತಗಳು

ಸಭೆಯ ನಿರಂತರ ಬೆಳವಣಿಗೆಗೆ ಗಮನಾರ್ಹವಾದ ಅದ್ಭುತಗಳು ಕಾರಣವಾದವು ಎಂದು ನಾವು ನೋಡುತ್ತೇವೆ. ಅಲ್ಲಿ ಅನೇಕ ಅದ್ಭುತಗಳಾದವು, ಆದರೆ ಅಪೋಸ್ತರ ಕೃತ್ಯಗಳಲ್ಲಿ ನಮಗಾಗಿ ಗಮನಾರ್ಹವಾದಂತವುಗಳು ಮಾತ್ರ ದಾಖಲಾಗಿವೆ. ಒಬ್ಬ ಮನುಷ್ಯನಿದ್ದನು ಅವನು 40 ವರ್ಷಗಳ ಕಾಲ ಕುಂಟನಾಗಿದ್ದನು, ಅವನಿಗೆ ಗುಣವಾಗಿತ್ತು (ಅಪೋಸ್ತಲರ ಕೃತ್ಯಗಳು 3:1-8). ಕೇವಲ ಪೇತ್ರನ ನೆರಳು ಅವರ ಮೇಲೆ ಬೀಳಬೇಕೆಂದು ರೋಗಿಗಳಾಗಿದ್ದಂತಹ ಜನರು ಬಹಳ ದೂರದಿಂದ ಬಂದಿದ್ದರು ಮತ್ತು ಅವರು ಗುಣವಾದರು!

**ಅಪೋಸ್ತಲರ ಕೃತ್ಯಗಳು 5:12-16**

**12 ಇದಲ್ಲದೆ ಅಪೊಸ್ತಲರ ಕೈಯಿಂದ ಅನೇಕ ಸೂಚಕಕಾರ್ಯಗಳೂ ಅದ್ಭುತಕಾರ್ಯಗಳೂ ಜನರಲ್ಲಿ ನಡೆಯುತ್ತಾ ಇದ್ದವು. ಮತ್ತು ಎಲ್ಲರು ಒಗ್ಗಟ್ಟಾಗಿ ಸೊಲೊಮೋನನ ಮಂಟಪದಲ್ಲಿ ಇರುತ್ತಿದ್ದರು.**

**13 ಅವರ ಜೊತೆಯಲ್ಲಿರುವದಕ್ಕೆ ಮಿಕ್ಕಾದವರೊಳಗೆ ಒಬ್ಬರಿಗೂ ಧೈರ್ಯವಿರಲಿಲ್ಲ. ಆದರೂ ಜನರು ಅವರನ್ನು ಬಹಳವಾಗಿ ಕೊಂಡಾಡುತ್ತಿದ್ದರು**

**14 ಮತ್ತು ಇನ್ನು ಎಷ್ಟೋ ಮಂದಿ ಗಂಡಸರೂ ಹೆಂಗಸರೂ ಕರ್ತನಲ್ಲಿ ನಂಬಿಕೆಯಿಡುವವರಾಗಿ ಅವರ ಮಂಡಲಿಯಲ್ಲಿ ಸೇರಿಕೊಳ್ಳುತ್ತಿದ್ದರು.**

**15 ಹೀಗಿರುವದರಿಂದ ಜನರು ರೋಗಿಗಳನ್ನು ದೋಲಿಗಳ ಮೇಲೆಯೂ ಹಾಸಿಗೆಗಳ ಮೇಲೆಯೂ ಇಟ್ಟು ಪೇತ್ರನು ಬರುವಾಗ್ಗೆ ಅವನ ನೆರಳು ಇವರಲ್ಲಿ ಯಾವನ ಮೇಲಾದರೂ ಬೀಳಲಿ ಎಂದು ಅವರನ್ನು ಬೀದಿಗೆ ತೆಗೆದುಕೊಂಡು ಬರುತ್ತಿದ್ದರು.**

**16 ಯೆರೂಸಲೇಮಿನ ಸುತ್ತಲಿರುವ ಊರುಗಳ ಜನರು ಸಹ ರೋಗಿಗಳನ್ನೂ ದೆವ್ವಗಳ ಕಾಟವಿದ್ದವರನ್ನೂ ಹೊತ್ತುಕೊಂಡು ಗುಂಪು ಗುಂಪಾಗಿ ಬರುತ್ತಿದ್ದರು; ಅವರೆಲ್ಲರಿಗೂ ವಾಸಿಯಾಗುವದು.**

ಹಾಗಾಗಿ, ಉಜ್ಜೀವನದ ಮಧ್ಯದಲ್ಲಿ, ಇದೇ ಸಂಗತಿ ನಮ್ಮ ಮಧ್ಯದಲ್ಲಿ ಸಹ ನಡೆಯುವಂತ್ತದ್ದಾಗಿದೆ. ಗಮನಾರ್ಹವಾದ ಅದ್ಭುತಗಳು ನಡೆಯುತ್ತವೆ. ನಮ್ಮ ಜೀವಿತದಲ್ಲಿ ಪ್ರತಿದಿನದ ಅದ್ಭುತಗಳಿಗಾಗಿ ನಾವು ದೇವರಿಗೆ ವಂದನೆ ಸಲ್ಲಿಸುತ್ತೇವೆ, ಆದರೆ ಉಜ್ಜೀವನದ ಹಾದಿಯಲ್ಲಿ ನಮ್ಮ ಮಧ್ಯದಲ್ಲಿಯೂ ಗಮನಾರ್ಹ ಅದ್ಭುತಗಳು ನಡೆಯಲು ಪ್ರಾರಂಭಿಸುತ್ತವೆ.

## ಉಪದ್ರವ

ಉಜ್ಜೀವನದಲ್ಲಿರುವ ಸಭೆ ಉಪದ್ರವನ್ನು ಆಕರ್ಷಿಸುತ್ತದೆ. ನಾವು ಸುರಿಸುವಿಕೆಯ ಮಧ್ಯದಲ್ಲಿರುವಾಗ, ಕೆಲವು ಕಾರಣಗಳಿಂದಾಗಿ, ಅದು ಉಪದ್ರವನ್ನು ಆಕರ್ಷಿಸುತ್ತದೆ. ಹಾಗಿದ್ದರೆ, ನಿಜವಾಗಲೂ ನಮಗೆ ಸುರಿಸುವಿಕೆ ಬೇಕಾ? ಪೇತ್ರ ಮತ್ತು ಯೋಹಾನನ್ನು ನ್ಯಾಯಸಭೆಯ ಮುಂದೆ ಕರೆ ತಂದರು ಮತ್ತು ಯೇಸುವಿನ ನಾಮವೆತ್ತಿ ಪ್ರಸಂಗಿಸಬಾರದೆಂದು ಆಜ್ಞೆ ಕೊಟ್ಟರು (ಅಪೋಸ್ತಲರ ಕೃತ್ಯಗಳು 4:17,18). ಅಪೋಸ್ತಲರನ್ನು ಸೆರೆಮನೆಗೆ ಹಾಕಿದರು (ಅಪೋಸ್ತಲರ ಕೃತ್ಯಗಳು 5:17,18). ಸ್ತೆಫನನನ್ನು ಕಲ್ಲೆಸೆದು ಕೊಂದರು (ಅಪೋಸ್ತಲರ ಕೃತ್ಯಗಳು 7:58). ಸುರಿಸುವಿಕೆಯ ಮಧ್ಯದಲ್ಲಿ ಹೆಚ್ಚಿದ ಉಪದ್ರವ ಅಸಾಮಾನ್ಯವೇನಲ್ಲಾ. ಆದರೆ ಅಪೋಸ್ತಲರು ಹೇಗೆ ಪ್ರತಿಕ್ರಿಯಿಸಿದರು ಎಂಬದನ್ನು ಗಮನಿಸಿರಿ.

**ಅಪೋಸ್ತಲರ ಕೃತ್ಯಗಳು 4:19,20**
**19ಅದಕ್ಕೆ ಪೇತ್ರ ಯೋಹಾನರು ಅವರಿಗೆ - ದೇವರ ಮಾತನ್ನು ಕೇಳುವದಕ್ಕಿಂತಲೂ ನಿಮ್ಮ ಮಾತನ್ನು ಕೇಳುವದು ದೇವರ ಮುಂದೆ ನ್ಯಾಯವೋ ಏನು? ನೀವೇ ತೀರ್ಪುಮಾಡಿಕೊಳ್ಳಿರಿ;**
**20ನಾವಂತೂ ಕಂಡು ಕೇಳಿದ್ದನ್ನು ಹೇಳದೆ ಇರಲಾರೆವು ಎಂದು ಉತ್ತರ ಕೊಟ್ಟರು.**

**ಅಪೋಸ್ತಲರ ಕೃತ್ಯಗಳು 5:41**
**ಅಪೊಸ್ತಲರುತಾವುಆಹೆಸರಿನನಿಮಿತ್ತವಾಗಿಅವಮಾನಪಡುವದಕ್ಕೆಯೋಗ್ಯರೆನಿಸಿಕೊಂಡೆವೆಂದು ಸಂತೋಷಿಸುತ್ತಾ ಹಿರೀಸಭೆಯ ಎದುರಿನಿಂದ ಹೊರಟುಹೋದರು.**

ಅಪೋಸ್ತಲರು ದೇವರಿಗೆ ಪರಲೋಕವನ್ನು ಮುಚ್ಚಬೇಕು ಅಥವಾ ದೇವರು ಸುರಿಸುವಿಕೆಯನ್ನು "ಕಡಿಮೆ" ಮಾಡಬೇಕೆಂದು ಹೇಳುತ್ತೇವೆ ಎನ್ನಲಿಲ್ಲ. ಬದಲಾಗಿ, ದೇವರು ಮಾಡುತ್ತಾ ಇದ್ದ ಸಂಗತಿಗಳೊಡನೆ ಹೋಗುವದಕ್ಕೆ ಅವರು ಸಂತೋಷವುಳ್ಳವರಾಗಿದ್ದರು. ದೇವರಿಗೆ ವಿಧೇಯರಾಗುವ ವಿಷಯದಲ್ಲಿ ಅವರು ಸಂತೋಷವುಳ್ಳವರಾಗಿದ್ದರು ಮತ್ತು ನಮ್ಮ ಕರ್ತನಾದ ಯೇಸು ಕ್ರಿಸ್ತನ ನಾಮದ ನಿಮಿತ್ತ ಭಾಧೆಗಳನ್ನು ಅನುಭವಿಸುವದು ಗೌರವವುಳ್ಳದ್ದು ಎಂದು ಎಣಿಸಿದರು. ಕರ್ತನಾದ ಯೇಸು ಕ್ರಿಸ್ತನ ನಾಮದ ನಿಮಿತ್ತವಾಗಿ ಭಾದೆಗಳನ್ನು ಅನುಭವಿಸುವದು ನಾವು ಸಹ ಗೌರವವುಳ್ಳದ್ದು ಎಂದು ಎಣಿಸಬೇಕು!

ನಮ್ಮಲ್ಲಿ ಬಹುತೇಕ ಜನರು ಬಹಳ ಆರಾಮದಾಯಕ ಕ್ರೈಸ್ತಿಯ ಜೀವನವನ್ನು ನಡೆಸಿದ್ದೇವೆ. ನಾವು ಬಹಳ ವಿರಳವಾಗಿ ಯಾವುದೇ ಉಪದ್ರವವನ್ನು ನೋಡುತ್ತೇವೆ. ನಮ್ಮ ಕೆಲಸದ ಸ್ಥಳದಲ್ಲಿ ನಮ್ಮ ನಂಬಿಕೆಯ ಬಗ್ಗೆ ತಿಳಿದು ಕೊಂಡ ನಂತರ ನಮ್ಮ ಸಹೊದ್ಯೋಗಿ—ನಮ್ಮ ಜೊತೆ ಮಾತನಾಡದಿರುವದು ಅಥವಾ ನಮ್ಮ ಸಂಗಡ ಊಟಕ್ಕೆ ಹೋಗದಿರುವದು ಅಥವಾ ಮುಂಚೆ ನಮಗೆ ಕಾಫಿ ತರುತ್ತಿದದ್ದನ್ನು ಅವನು ನಿಲ್ಲಿಸಿ ಬಿಡುವದು—ಅವನು ಮಾಡುವ ಆ ಒಂದು "ಸಣ್ಣ ಸಂಗತಿ" ಯನ್ನು ನಾವು ಅನುಭವಿಸಿರಬಹುದು ಮತ್ತು ನಮ್ಮ ನಂಬಿಕೆಯ ನಿಮಿತ್ತವಾಗಿ ನಮ್ಮ ಕೆಲಸದ ಸ್ಥಳದಲ್ಲಿ ಉಪದ್ರವವನ್ನು ಅನುಭವಿಸುತ್ತಿದ್ದೇವೆ ಎಂದು ನಾವು ಆಲೋಚಿಸುತ್ತೇವೆ. ಪ್ರಾಮಾಣಿಕವಾಗಿ, "ಉಪದ್ರವ" ವೆಂದು ಕರೆಯಲ್ಪಡುವ ಯಾವುದೇ ಸಂಗತಿಯನ್ನು ನಾವು ಇನ್ನೂ ನೋಡಿಲ್ಲ. ಆದರೆ "ದೇವರೆ, ನಮಗೆ ಉಜ್ಜೀವನ ಬೇಕು" ಎಂದು ಹೇಳುವದಾಗಿದ್ದರೆ, ಆಗ ನಾವು ಯೆರುಸಲೇಮಿನಲ್ಲಿದ್ದ ಸಭೆ ಅನುಭವಿಸಿದ ಹಾಗೆ ಹೆಚ್ಚಿದ ಉಪದ್ರವಕ್ಕೆ ನಾವು ಸಿದ್ಧರಾಗಿರಬೇಕು.

## ಪಾಪಕ್ಕೆ ಬಲವಾದ ನ್ಯಾಯತೀರ್ಪು

ಒಂದು ಉಜ್ಜೀವನದ ವಾತಾವರಣದಲ್ಲಿ, ಸಮೃದ್ಧಿಯಾದ ಕೃಪೆ, ಅಧ್ಭುತಗಳು, ಮತ್ತು ವರಗಳು ದೇವ ಜನರ ಮಧ್ಯದಲ್ಲಿ ಬಿಡುಗಡೆಯಾಗುತ್ತದೆ ಎಂದು ನಮ್ಮೆಲ್ಲರಿಗೂ ಗೊತ್ತಿದೆ. ಆದರೆ ಅದೇ ಸಮಯದಲ್ಲಿ, ಪಾಪಕ್ಕೆ ವಿರುದ್ಧವಾಗಿ ಒಂದು ತ್ವರಿತ ನ್ಯಾಯತೀರ್ಪು ಇದೆ. ನಾವು ಸುಳ್ಳು ಹೇಳುವಾಗ ನಮ್ಮಲ್ಲಿ ಎಷ್ಟು ಮಂದಿ ಸತ್ತವರಾಗಿ ಬೀಳುತ್ತೇವೆ? ಅದು ಸಂಭವಿಸುವದಾಗಿದ್ದರೆ, ಇಲ್ಲಿ ಯಾರೂ ಜೀವದಿಂದಿರುತ್ತಿರಲಿಲ್ಲ. ಇವತ್ತು, ನಾವೆಲ್ಲರೂ ವಿಶ್ವಾಸಿಗಳಾಗಿದ್ದರೂ, ನಮ್ಮಲ್ಲಿ ಕೆಲವರು ಇನ್ನೂ ಸುಳ್ಳು ಹೇಳುತ್ತಾರೆ, ಕದಿಯುತ್ತಾರೆ ಮತ್ತು ಆದರೂ ಯಾರೂ ಸತ್ತು ಕೆಳಗೆ ಬೀಳುವದಿಲ್ಲ! ಆದರೆ ಯೆರುಸಲೇಮಿನಲ್ಲಿನ ಉಜ್ಜೀವನದ ಮಧ್ಯದಲ್ಲಿ, ಅನನೀಯ ಮತ್ತು ಸಫೈರ ಸುಳ್ಳಾಡಿದರು ಮತ್ತು ಸಭೆಗೆ ಕೊಡಬೇಕಾಗಿದ್ದ ಅವರು ಒಂದು ಸಣ್ಣ ಹೊಂದಾಣಿಕೆಯನ್ನು ಮಾಡಿದರು, ಮತ್ತು ಅವರು ಸತ್ತು ಬಿದ್ದರು (ಅಪೋಸ್ತಲರ ಕೃತ್ಯಗಳು 5:1-10). ಅದು ಉಗ್ರವಾದ ನ್ಯಾಯತೀರ್ಪು!

## ಅಲೌಕಿಕ ಪ್ರದರ್ಶನಗಳು ಮತ್ತು ದೇವದೂತರ ಸಂದರ್ಶನ

ಸ್ವಸ್ಥತೆಗಳು ಮತ್ತು ಅದ್ಭುತಗಳ ಜೊತೆಗೆ ಆದಿ ಸಭೆಯು ಅಲೌಕಿಕ ಪ್ರದರ್ಶನಗಳು ಮತ್ತು ದೇವದೂತರ ಸಂದರ್ಶನವನ್ನು ಅನುಭವಿಸಿತು. ಅಪೊಸ್ತಲರ ಕೃತ್ಯಗಳು 4:31 ದಾಖಲು ಮಾಡುತ್ತದೆ, "... ಅವರು ಪ್ರಾರ್ಥನೆಗಾಗಿ ಕೂಡಿ ಬಂದಿದ್ದ ಸ್ಥಳವು ನಡುಗಿತು." ಅದು ಕೇವಲ ನೆಲದ ಮೇಲಿನ ಕಂಪನವಾಗಿರಲಿಲ್ಲ, ಆದರೆ ಅವರು ಕೂಡಿ ಬರುತ್ತಿದ್ದ ಸ್ಥಳವು ನಡುಗಿತು. ನೀವು ಒಂದು ಪ್ರಾರ್ಥನಾ ಕೂಟದಲ್ಲಿ

ಇದ್ದೀರಿ ಎಂದು ಊಹಿಸಿ ಕೊಳ್ಳಿರಿ ಮತ್ತು ಕಟ್ಟಡವು ಅಲುಗಾಡುವ ಅನುಭವ ನಿಮಗಾಗುತ್ತದೆ, ಆದರೆ ಯಾವುದೂ ಬೀಳುವದಿಲ್ಲ. ಅಪೊಸ್ತಲರ ಕೃತ್ಯಗಳು 5:19-21 ದೇವದೂತರು ಬಂದು ಅಪೋಸ್ತಲರನ್ನು ಸೆರೆಮನೆಯಿಂದ ಹೊರ ತಂದರು ಎಂದು ಹೇಳುತ್ತದೆ. ಅಪೋಸ್ತಲರ ಕೃತ್ಯಗಳು 8:26 ಅರಣ್ಯ ಸ್ಥಳಕ್ಕೆ ಹೋಗಬೇಕೆಂದು ಫಿಲಿಪ್ಪನಿಗೆ ದೇವದೂತನು ಸೂಚಿಸಿದನು ಎಂದು ದಾಖಲಾಗಿದೆ. ಹಾಗಾಗಿ, ದೇವದೂತರ ಚಟುವಟಿಕೆ ಮತ್ತು ದೇವದೂತರ ಸೇವೆ ಸುರಿಸುವಿಕೆಯ ಮಧ್ಯದಲ್ಲಿ ಏರಿಕೆಯಾಗಲಿದೆ.

## ಆಂತರಿಕ ಸಮಸ್ಯೆಗಳು ರಹಿತವಾಗಿರುವದಿಲ್ಲ

ಸುರಿಸುವಿಕೆಯ ಅಥವಾ ಸಂದರ್ಶನದ ಮಧ್ಯದಲ್ಲಿ, ಸಭೆಯು ಅಂತರಿಕ ಸಮಸ್ಯೆ ರಹಿತವಾಗಿರುವದಿಲ್ಲ. ಕೆಲವೊಮ್ಮೆ ಅಲ್ಲೊಂದು ಬಲವಾದ ದೇವರ ಸಂದರ್ಶನವಿರುವದರಿಂದ, ಅಲ್ಲಿ ಯಾವುದೇ ಕಾರಣಕ್ಕೂ ಸಮಸ್ಯೆಗಳಿರುವದಿಲ್ಲ ಎಂಬ ತಪ್ಪು ಅನಿಸಿಕೆ ನಮಗಿದೆ. ಆ ಕಲ್ಪನೆಗೆ ವಿರುದ್ಧವಾಗಿ ಯೆರುಸಲೇಮಿನಲ್ಲಿದ್ದ ಸಭೆಯು ಸಮಸ್ಯೆಗಳನ್ನು ಅನುಭವಿಸಿತು. ವಿಧವೆಯರ ಮಧ್ಯದಲ್ಲಿ ವಿವಾದವುಂಟಾದಾಗ ಅವರು ಮೊದಲನೇಯ ಸಮಸ್ಯೆಯನ್ನು ಎದುರಿಸಬೇಕಾಯಿತು. ಕೆಲವರು ಗ್ರೀಕ್ ಮಾತಾಡುವ ವಿಧವೆಯರಾಗಿದ್ದರು ಇನ್ನು ಕೆಲವರು ಇಬ್ರಿಯ ಮಾತಾಡುವ ವಿಧವೆಯರಾಗಿದ್ದರು. ಆಹಾರ ವಿತರಣೆಯಲ್ಲಿ ತಮ್ಮೊಂದಿಗೆ ನ್ಯಾಯಯುತವಾಗಿ ನಡೆದುಕೊಳ್ಳುತ್ತಿಲ್ಲ ಎಂದು ಕೆಲವರಿಗೆ ಅನ್ನಿಸಿತು (ಅಪೋಸ್ತಲರ ಕೃತ್ಯಗಳು 6). ಹಾಗಾಗಿ ಅಲ್ಲಿ ಸಮಸ್ಯೆಯಿತ್ತು, ಆದರೆ ಅಪೋಸ್ತಲರು ದೇವರ ಜ್ಞಾನದಿಂದ ಎದ್ದರು ಮತ್ತು ಸಮಸ್ಯೆಯನ್ನು ಪರಿಹರಿಸಿದರು.

ಒಂದು ಅಂಶವೇನಂದರೆ ನಮ್ಮ ಉಜ್ಜೀವನದ ಸಮಯದಲ್ಲಿ ಸಹ ಆಂತರಿಕ ಸಮಸ್ಯೆಗಳಿರಬಹುದು ಮತ್ತು ನಾವು ದೇವರ ಜ್ಞಾನದಿಂದ ಅವುಗಳನ್ನು ಉದ್ದೇಶಿಸಿ ಮಾತನಾಡಬೇಕು ಮತ್ತು ಹೆದರಬಾರದು. ಇನ್ನೊಂದು ಗಮನಾರ್ಹ ಸಂಗತಿಯೇನೆಂದರೆ, ನಾಯಕರು ತಮ್ಮನ್ನೇ ತಾವು ನಿರಂತರವಾಗಿ ಪ್ರಾಮುಖ್ಯವಾದದ್ದಕ್ಕೆ ನೀಡಬೇಕೆಂದು ನಿರ್ಧರಿಸಿದರು—ವಾಕ್ಯದ ಸೇವೆ ಮತ್ತು ಪ್ರಾರ್ಥನೆಗೆ. ನಾಯಕರು ಯಾವುದು ಪ್ರಾಮುಖ್ಯವಾಗಿತ್ತೊ ಅದರ ಮೇಲೆ ಗಮನ ಹರಿಸಿದರು—ಉಜ್ಜೀವನಕ್ಕೆ ನಾಯಕತ್ವ ಒದಗಿಸುವದು. ದೇವರನ್ನು ನಾವು ಹಿಂದಟ್ಟುವಾಗ ಇದು ಒಂದು ಪ್ರಾಮುಖ್ಯವಾದ ಪಾಠವಾಗಿದೆ.

ನಾಯಕರನ್ನು ಮೇಲಕ್ಕೆತ್ತದಂತೆ ಸಹ ನಾವು ಎಚ್ಚರ ವಹಿಸಬೇಕು. ಉಜ್ಜೀವನವು ಒಬ್ಬ ಮನುಷ್ಯ ಅಥವಾ ಒಂದು ಸೇವೆಯ ಸುತ್ತ ಕೇಂದ್ರಿಕೃತವಾಗಿರಬಾರದು. ಮತ್ತು ಇನ್ನೂ, ಉಜ್ಜೀವನಕ್ಕಾಗಿ ನಾಯಕತ್ವದ ಪ್ರಾಮುಖ್ಯತೆಯನ್ನು ನಾವು ಅರ್ಥಮಾಡಿಕೊಳ್ಳಬೇಕು—ನಾಯಕರು ತಮ್ಮ

ಸ್ಥಾನವನ್ನು ತೆಗೆದುಕೊಳ್ಳಬೇಕು, ಜವಾಬ್ದಾರಿಯುಳ್ಳವರಾಗಿರಬೇಕು, ದೇವರು ಅವರು ಏನು ಮಾಡಲು ಬಯಸುತ್ತಾನೋ ಅದರ ಮೇಲೆ ಕೇಂದ್ರಿಕರಿಸಬೇಕು. ಇದು ಸುರಿಸುವಿಕೆ ವಿಸ್ತರಿಸಲು, ಹೆಚ್ಚಿಸಲು ಮತ್ತು ಗತಿಸಿ ಹೋಗದಂತೆ ಸಹಾಯ ಮಾಡುತ್ತದೆ. ವೆಲ್ಷ ಉಜ್ಜೀವನದ ಬಗ್ಗೆ ಒಂದು ದುಃಖದ ಸಂಗತಿಯಿತ್ತು. ಇವಾನ್ ರಾಬರ್ಟ್ಸ್ ಉಜ್ಜೀವನದ ಪ್ರಮುಖ ನಾಯಕರಲ್ಲಿ ಒಬ್ಬರು ಮತ್ತು ವಾಸ್ತವವಾಗಿ, ಉಜ್ಜೀವನದ ಉತ್ತುಂಗದಲ್ಲಿ ಪ್ರಾಮುಖ್ಯತೆಗೆ ಬಂದರು, ಆದರೆ ದುರದೃಷ್ಟಕರವಾದದ್ದೇನೊ ಸಂಭವಿಸಿತು. ಅವರು ನಾಯಕತ್ವದ ಸ್ಥಾನದಿಂದ ಇದ್ದಕ್ಕಿದ್ದಂತೆ ಹೊರಬಂದರು. ಇವಾನ್ ರಾಬರ್ಟ್ಸ್ ರವರು ಮಾನಸಿಕ ಮತ್ತು ದೈಹಿಕ ಕುಸಿತವನ್ನು ಅನುಭವಿಸಿದರು—ಬಳಲಿ ಹೋದರು. ಬಹುತೇಕ ರಾತ್ರೋರಾತ್ರಿ, ಅವರು ನಾಯಕತ್ವದ ಸ್ಥಾನದಿಂದ ಹೊರಬಂದರು ಮತ್ತು ಅವರ ಉಳಿದ ಜೀವನವನ್ನು ಹೆಚ್ಚಾಗಿ ಏಕಾಂತದಲ್ಲಿ—ಬರವಣಿಗೆ ಹಾಗೂ ಪ್ರಾರ್ಥನೆಯಲ್ಲಿ ಕಳೆದರು. ವೆಲ್ಷ್ ಉಜ್ಜೀವನದಲ್ಲಿ ಶಕ್ತಿಯುತವಾಗಿ ದೇವರು ಉಪಯೋಗಿಸಿದ ಒಬ್ಬ ಮನುಷ್ಯನಿಗೆ ಬಹಳ ದುಃಖದ ಅಂತ್ಯ!

ಉಜ್ಜೀವನದಲ್ಲಿ ನಾಯಕತ್ವವು ಬಹಳ ಪ್ರಾಮುಖ್ಯವಾದದ್ದಾಗಿದೆ. ನಾವು ನಾಯಕತ್ವವನ್ನು ಮೇಲೆತ್ತದೆ ಮತ್ತು ಘನಪಡಿಸಲು ಬಯಸದೆ ಇರುವಾಗ, ಉಜ್ಜೀವನದ ನಾಯಕತ್ವದಲ್ಲಿರುವಂತವರು ಗಮನವನ್ನು ಕೇಂದ್ರಿಕರಿಸುವದು ಬಹಳ ಪ್ರಾಮುಖ್ಯ, ನಮ್ಮನ್ನೆ ಬಳಲಿ ಹೋಗದಂತೆ ಕಾಪಾಡಿಕೊಳ್ಳಬೇಕು ಹಾಗೂ ಅದೇ ಸಮಯದಲ್ಲಿ ಉಸ್ತುವಾರಿಗಳಾಗಿರಬೇಕು ಯಾಕೆಂದರೆ ಆತನು ಭೂಮಿಯ ಮೇಲೆ ನಮ್ಮ ಮಧ್ಯದಲ್ಲಿ ಏನು ಬಿಡುಗಡೆ ಮಾಡಲಿದ್ದಾನೋ ಅದಕ್ಕೆ ನಾವು ಲೆಕ್ಕ ಕೊಡುವವರಾಗಿದ್ದೇವೆ ಎಂಬದನ್ನು ನಾವು ಅರ್ಥ ಮಾಡಿಕೊಳ್ಳಬೇಕು.

## ಎಲ್ಲರೂ ಅದ್ಭುತದಲ್ಲಿ ಹರಿಯುತ್ತಿದ್ದಾರೆ

ಅಪೋಸ್ತಲರ ಕೃತ್ಯಗಳು ಪುಸ್ತಕದಲ್ಲಿ, ಸುರಿಸುವಿಕೆಯು ಮುಂದುವರಿದಂತೆ ಎಲ್ಲರೂ ಅಧ್ಭುತದಲ್ಲಿ ಹರಿಯಲು ಪ್ರಾರಂಭಿಸಿದರು ಎಂದು ನಾವು ನಂತರ ನೋಡುತ್ತೇವೆ. ಶೀಘ್ರದಲ್ಲೇ, ನಾವು ಸ್ತೆಫನನ (ಅಪೋಸ್ತರ ಕೃತ್ಯಗಳು 6) ಫಿಲಿಪ್ಪನ (ಅಪೋಸ್ತಲರ ಕೃತ್ಯಗಳು 8) ಮೂಲಕ ಪ್ರಬಲವಾದ ಸೂಚಕಕಾರ್ಯ ಮತ್ತು ಆಶ್ಚರ್ಯಕಾರ್ಯಗಳು ಬಿಡುಗಡೆಯಾಗುವದರ ಬಗ್ಗೆ ಕೇಳುತ್ತೇವೆ. ಸಭೆಯಲ್ಲಿರುವ ಪ್ರತಿಯೊಬ್ಬರು ಯೇಸು ಕ್ರಿಸ್ತನ ನಾಮದಲ್ಲಿ ರೋಗಿಗಳನ್ನು ಗುಣಪಡಿಸುವದು, ದೆವ್ವಗಳನ್ನು ಬಿಡಿಸುವದು ಮತ್ತು ಸತ್ತವರನ್ನು ಎಬ್ಬಿಸುವದನ್ನು ದೇವರು ನೋಡ ಬಯಸುತ್ತಾನೆ ಎಂದು ನಾನು ದೃಢವಾಗಿ ನಂಬುತ್ತೇನೆ. ಈ ನಗರದಲ್ಲಿನ ಆತನ ಜನರು ನಮ್ಮ ನಗರದಲ್ಲಿನ ಬೀದಿಗಳನ್ನು ಪ್ರವೇಶಿಸಿ ದೇವರ ಮಹಿಮೆಯನ್ನು ಪ್ರದರ್ಶಿಸಬೇಕೆಂದು ಆತನು ಬಯಸುತ್ತಾನೆ. ಅಗತ್ಯವಿರುವ ಜನರು ಎಲ್ಲೇ ಇದ್ದರೂ ಪ್ರತಿಯೊಬ್ಬ ವಿಶ್ವಾಸಿಗಳು ಪ್ರಬಲವಾದ

ಸೂಚಕಕಾರ್ಯಗಳನ್ನು ಮತ್ತು ಆಶ್ಚರ್ಯಕಾರ್ಯಗಳನ್ನು ಬೀದಿಗಳಲ್ಲಿ ಪ್ರದರ್ಶಿಸುತ್ತಾರೆ. ಮತ್ತು ಅದನ್ನೇ ದೇವರು ಸಭೆಯೊಳಗೆ ತರಲು ಬಯಸುತ್ತಾನೆ ಹಾಗೂ ಸುರಿಸುವಿಕೆಯ ಮಧ್ಯದಲ್ಲಿ ಅದೇ ಸಂಭವಿಸುವಂತ್ತದ್ದಾಗಿದೆ. ನಾನು ಮತ್ತು ನೀವು ದೇವರ ಮಹಿಮೆಯನ್ನು ಬೀದಿಗಳಲ್ಲಿ, ಮಾರುಕಟ್ಟೆಗಳಲ್ಲಿ, ಜನರಿರುವಂತ ಎಲ್ಲೆಡೆ ಹೊತ್ತು ಸಾಗುವವರಾಗಿದ್ದೇವೆ!

## ಬೆಂಕಿಯು ಹರಡುತ್ತದೆ

ಉಜ್ಜೀವನದ ಬೆಂಕಿಯು ಹರಡುತ್ತದೆ! ಯೆರುಸಲೇಮಿನಲ್ಲಿ ಸೌಲನ ನೇತೃತ್ವದಲ್ಲಿ ನಡೆದ ಉಪದ್ರವದ ಕಾರಣ, ವಿಶ್ವಾಸಿಗಳು ಚದರಿ ಹೋದರು ಆದರೆ ಅವರು ಹೋದಲ್ಲೆಲ್ಲಾ ಉಜ್ಜೀವನದ ಬೆಂಕಿಯನ್ನು ಹೊತ್ತೊಯ್ದರು. ಅವರು ಸಮಾರ್ಯ ಮತ್ತು ಯೂದಾಯಕ್ಕೆ ಹೋದರು ಹಾಗೂ ಆ ಸ್ಥಳಗಳು ಬೆಂಕಿಯಿಂದ ಉರಿದವು (ಅಪೋಸ್ತಲರ ಕೃತ್ಯಗಳು 8). ಕೆಲವರು ಅಂತಿಯೋಕ್ಯಕ್ಕೆ ಹೋದರು ಹಾಗೂ ಅಂತಿಯೋಕ್ಯವು ಹೊತ್ತಿ ಉರಿಯಿತು (ಅಪೋಸ್ತಲರ ಕೃತ್ಯಗಳು 11). ಸಾಮಾನ್ಯ ವಿಶ್ವಾಸಿಗಳು ಉಜ್ಜೀವನದ ಬೆಂಕಿಯನ್ನು ತಾವು ಹೋದಲ್ಲೆಲ್ಲಾ ತೆಗೆದುಕೊಂಡು ಹೋದರು. ದೇವರ ಸುರಿಸುವಿಕೆಯ ಮಧ್ಯದಲ್ಲಿ ನಾವು ಪ್ರತಿಯೊಬ್ಬರು ಸಹ ಉಜ್ಜೀವನದ ಬೆಂಕಿಯನ್ನು ಹೊತ್ತುಕೊಂಡು ಹೋಗುವವರು—“ಉಜ್ಜೀವನವನ್ನು ಒಯ್ಯುವವರು” ಆಗುತ್ತೇವೆ ಎಂದು ನಾನು ನಂಬುತ್ತೇನೆ.

ನಮ್ಮನ್ನು ಉಜ್ಜೀವನದ ಮಧ್ಯದಿಂದ ಹೊರ ಹಾಕುವದು ಉಪದ್ರವವಾಗಿರಬಹುದು ಅಥವಾ ಇಲ್ಲದೆ ಇರಬಹುದು. ಅದು ಒಂದು ವೇಳೆ ಹೊಸ ವೃತ್ತಿಯಾಗಿರಬಹುದು, ನಮ್ಮ ವೃತ್ತಿಗಳಲ್ಲಾಗುವ ವರ್ಗಾವಣೆಯಾಗಿರಬಹುದು ಮತ್ತು ಇನ್ನೂ ಇತ್ಯಾದಿಗಳು. ಬೆಂಗಳೂರು ನಗರದಿಂದ ನಾವು ಏಕೆ ಹೊರಹೋಗಬೇಕೆಂಬದಕ್ಕೆ ಹಲವು ಕಾರಣಗಳಿರಬಹುದು. ಆದರೆ ನಾವು ಹೋಗುವಾಗ, ದೇವರ ಸುರಿಸುವಿಕೆಯನ್ನು ನಾವು ಹೊತ್ತು ಹೋಗುವವರಾಗಿದ್ದೇವೆ! ನಾವು ದೇವರ ಬೆಂಕಿಯನ್ನು ಹೊತ್ತುಕೊಂಡು ಹೋಗುತ್ತೇವೆ ಹಾಗೂ ಪ್ರಪಂಚದ ಇತರ ಭಾಗಗಳಿಗೆ ಬೆಂಕಿ ಹೊತ್ತಿಸುತ್ತೇವೆ! ಮತ್ತು ಅದು ಉಜ್ಜೀವದಲ್ಲಿರುವ ಸಭೆಯಾಗಿದೆ!

ಉಜ್ಜೀವನದಲ್ಲಿರುವ ಸಭೆಯೆಂದರೆ, ನಮಗೆ ತಿಳಿದಿರುವಂತೆ ದೇವರು ಮಾಡುತ್ತಿರುವಂತವುಗಳ ಮಧ್ಯದಲ್ಲಿ ನಮ್ಮ ದೈನಂದಿನ ಜೀವನದ ಮೇಲೆ ಪರಿಣಾಮ ಬೀರುತ್ತದೆ; ಅದು ನಮ್ಮ ಸಭೆಯ ಜೀವನದ ಮೇಲೂ ಸಹ ಪರಿಣಾಮ ಬೀರುವಂತದ್ದಾಗಿದೆ. ಆದರೆ ಇದು ಎಲ್ಲಕ್ಕಿಂತಲೂ ಬೆಲೆಯುಳ್ಳದಾಗಿದೆ ಯಾಕೆಂದರೆ, ನಮ್ಮ ಪಟ್ಟಣವು ಬದಲಾಗಬೇಕಾದರೆ ಅದಕ್ಕೆ ದೇವರ ಸಂದರ್ಶನ ನಿಜವಾಗಲೂ ಅಗತ್ಯವಿದೆ. ನಮ್ಮ ಪಟ್ಟಣವು ಪ್ರಭಾವಕ್ಕೊಳಗಾಗಬೇಕಾದರೆ, ಇಂದು ನಮಗಿರುವಂತವುಗಳಿಗಿಂತ ದೇವರು

ನಮಗೆ ಹೆಚ್ಚಾಗಿ ಬೇಕೆಂದು ಅದು ಅರ್ಥೈಸುತ್ತದೆ. ನಮ್ಮ ಪಟ್ಟಣದಲ್ಲಿ ಈಗಾಗಲೇ ಸಂಭವಿಸಿದ ಎಲ್ಲವುಗಳಿಗೆ ನಾವು ಕೃತಜ್ಞತರಾಗಿರುವಾಗಲೆ, ನಮ್ಮ ಪಟ್ಟಣದಲ್ಲಿ ಇನ್ನೂ ಯೇಸು ಕ್ರಿಸ್ತನನ್ನು ತಿಳಿಯದೆ ಇರುವ ಜನರ ಸಂಖ್ಯೆಯ ಬಗ್ಗೆ ಆಲೋಚಿಸಿ. ಕ್ರಿಸ್ತನನ್ನು ಅರಿಯದ ಇನ್ನೂ ಲಕ್ಷಾಂತರ ಜನರಿದ್ದಾರೆ. ನಮ್ಮ ಪಟ್ಟಣವನ್ನು ಪ್ರಭಾವಗೊಳಿಸಲು ಹೋಗುವದಾದರೆ, ನಾವು ದೇವರ ಪ್ರಬಲವಾದ ಸುರಿಸುವಿಕೆಯನ್ನು ಹೊಂದಿರಬೇಕು. ನಾವು ದೇವರ ಸಂದರ್ಶನವನ್ನು ಹೊಂದಿರಬೇಕು. ಇಂದು ನಾವು ನಡೆಯುತ್ತಿರುವದಕ್ಕಿಂತ ಹೆಚ್ಚಾಗಿ ದೇವರು ಹೆಚ್ಚಾಗಿ ಬೇಕು, ಅದರರ್ಥ ನಾನು ಮತ್ತು ನೀವು ಅದರೊಳಗೆ ಸಾಗಬೇಕು. ಒಂದು ಪ್ರಬಲವಾದ ಉಜ್ಜೀವನಕ್ಕಾಗಿ, ತನ್ನ ಆತ್ಮನ ಮಹಾ ಸುರಿಸುವಿಕೆಗಾಗಿ ದೇವರಲ್ಲಿ ಕೇಳಿಕೊಳ್ಳಲು ನಾವು ಮನಸ್ಸುಳ್ಳವರಾಗಿದ್ದೇವೋ?

ಉಜ್ಜೀವನದ್ದಲ್ಲಿರುವ ಸಭೆಯಾಗುವದರ ಕಡೆಗೆ ನಾವು ಸಾಗೋಣ!

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು. ಆತನು ಪಾಪರಹಿತ ಜೀವಿತ ನಡೆಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ. ಯೇಸು ಭೂಲೋಕದಲ್ಲಿ ಅನೇಕ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕೇಳುವಂತೆ ಮಾಡಿದನು. ಹಸಿದ ಜನರಿಗೆ ಐದು ರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು, ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಕಾರ್ಯಗಳು ದೇವರು ಒಳ್ಳೆಯ ದೇವರಾಗಿದ್ದಾನೆ, ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಆತನು ಬಯಸುತ್ತಾನೆ. ಆತನು ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತದೆ.**

ಹಾಗಿದ್ದರೆ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು ? ಯೇಸುವು ಯಾಕೆ ಬಂದನು ?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಸರಿ ಕಾಣದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವದನ್ನು ಪಾಪವು ತಡೆ ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಆ ಮರಣವು ನರಕದಲ್ಲಿ ದೇವರಿಂದ ಶಾಶ್ವತವಾಗಿ ಬೇರ್ಪಡುವಿಕೆಯಾಗಿದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ***“ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯ ಜೀವ”*** **ಎಂದು ಹೇಳುತ್ತದೆ (ರೋಮಾಪುರದವರಿಗೆ 6:23).** ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆ ಮಾಡಿದ್ದಾನೆ. ಮೂರನೇ ದಿನದಲ್ಲಿ ಜೀವದಿಂದ ಎದ್ದು

ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ ಮತ್ತು ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ. ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ಜನರನ್ನು ಪಾಪದಿಂದ ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ—ನೀನು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

***"ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು ..."*** **(ಅಪೋಸ್ತಲರ ಕೃತ್ಯಗಳು 10:43).**

***"ನೀನು ಯೇಸುವನ್ನೇ ಕರ್ತನೆಂದು ಬಾಯಿಯಿಂದ ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದು"*** **(ರೋಮಾಪುರದವರಿಗೆ 10:9).**

ನೀವು ಸಹ ಯೇಸು ಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪಾಪ ಪರಿಹಾರಗಳನ್ನು ಹೊಂದಿಕೊಳ್ಳಬಹುದು.

ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧಿಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಸಹ ಪ್ರಾರ್ಥಿಸಬಹುದು.

*ಪ್ರೀಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದನ್ನು ಅರ್ಥಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರು ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮೆಯನ್ನು ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನ್ನು ರಕ್ಷಿಸಿಕೊಳ್ಳಲು ಆಗುವದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

ಈ ದಿನ ನಾನು ನನ್ನ ಹೃದಯದಿಂದ ನಂಬಿ, ನನ್ನ ಬಾಯಿಯಿಂದ ನೀನು ನನಗಾಗಿ ಮರಣವನ್ನು ಹೊಂದಿದೆ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ, ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧಿಕರಣ ಪಡೆದುಕೊಂಡೆ ಎಂದು ಹೇಳುತ್ತೇನೆ.

ಯೇಸುವೇ ನಿನಗೆ ವಂದನೆಗಳು, ನಿನ್ನನ್ನು ಪ್ರೀತಿಸಲು ಸಹಾಯ ಮಾಡು, ನಿನ್ನನ್ನು ಇನ್ನೂ ತಿಳಿಯಲೂ ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯ ಮಾಡು.

ಆಮೇನ್.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರಕ್ಕೆ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ಆಲ್ ಪೀಪಲ್ಸ್ ಸಭೆಯು ಯೇಸು **ಕ್ರಿಸ್ತನನ್ನು ಪ್ರೀತಿಸುವ, ವಾಕ್ಯದ ಮೇಲೆ ಕೇಂದ್ರಿಕರಿಸಲ್ಪಟ್ಟ, ಆತ್ಮನಿಂದ ತುಂಬಿಸಲ್ಪಟ್ಟ**, ಒಂದು ಸಜ್ಜುಗೊಳಿಸುವ ಕೇಂದ್ರ, ಸೇವಾ ತಳಹದಿಯ ಮತ್ತು ದೇಶಗಳನ್ನು ಸಂಧಿಸುವ ಒಂದು ಕುಟುಂಬ ಸಭೆಯಾಗಿದೆ.

- ಒಂದು **ಕುಟುಂಬ ಸಭೆಯಾಗಿ,** ನಾವು ಕ್ರಿಸ್ತ ಕೇಂದ್ರಿತ ಅನ್ಯೂನತೆಯಲ್ಲಿ, ದೇವರ ಸಭೆಯಂತೆ ನಾವು ಒಬ್ಬರಿಗೊಬ್ಬರು ಪ್ರೀತಿಯಲ್ಲಿ ಪರಸ್ಪರ ಕಾಳಜಿ ಮತ್ತು ಸೇವೆ ಮಾಡುವಂತಹ ಒಂದು ಸಮುದಾಯವಾಗಿ ಒಟ್ಟಿಗೆ ಬೆಳೆಯುತ್ತೇವೆ.
- ಒಂದು **ಸಜ್ಜುಗೊಳಿಸುವ ಕೇಂದ್ರವಾಗಿ,** ನಾವು ಪ್ರತಿ ವಿಶ್ವಾಸಿಯು ವಿಜಯಶಾಲಿಯಾಗಿ ಜೀವಿಸಲು, ಕ್ರಿಸ್ತನಂತೆ ಪ್ರಬುದ್ಧರಾಗಲು ಮತ್ತು ಅವರ ಜೀವಿತಗಳಿಗಾಗಿ ದೇವರ ಉದ್ದೇಶಗಳನ್ನು ನೆರವೇರಿಸಲು ಸಜ್ಜುಗೊಳಿಸುತ್ತೇವೆ ಮತ್ತು ಅಧಿಕಾರ ನೀಡುತ್ತೇವೆ.
- ಒಂದು **ಸೇವಾ ನೆಲೆಯಾಗಿ,** ದೇವರ ವಾಕ್ಯದ ಮೂಲಕವಾಗಿ ಯೇಸು ಕ್ರಿಸ್ತನ ಸಂಪೂರ್ಣ ಸುವಾರ್ತೆಯೊಂದಿಗೆ ಮತ್ತು ಪವಿತ್ರಾತ್ಮದ ಬಲದ ಅಪ್ರಾಕೃತ ತೋರ್ಪಡಿಸುವಿಕೆಗಳೊಡನೆ ನಮ್ಮ ನಗರ, ದೇಶ ಮತ್ತು ರಾಷ್ಟ್ರಗಳನ್ನು ಆಶೀರ್ವದಿಸಲು ಅರ್ಥಪೂರ್ಣ ಸೇವೆಯಲ್ಲಿ ನಾವು ತೊಡಗುತ್ತೇವೆ.
- ಒಂದು **ಪ್ರಪಂಚವನ್ನು ಸಂಧಿಸುವವರಾಗಿ,** ದೇವರ ರಾಜ್ಯಕ್ಕಾಗಿ ತಮ್ಮ ಪ್ರದೇಶಗಳ ಮೇಲೆ ಪ್ರಭಾವ ಬೀರುವ ದೈವಿಕ ನಾಯಕರನ್ನು ಮತ್ತು ಆತ್ಮಭರಿತ ಸಭೆಗಳನ್ನು ಪೋಷಿಸುವದರ ಮೂಲಕ ಸ್ಥಳಿಯವಾಗಿ ಮತ್ತು ಜಾಗತಿಕವಾಗಿ ನಾವು ಸೇವೆ ಸಲ್ಲಿಸುತ್ತೇವೆ.

ಆಲ್ ಪೀಪಲ್ಸ್ ಸಭೆಯಲ್ಲಿ ನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕ ಹೊಂದಿದ, ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜ್ಞನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನ ಹೊಂದಿದ ದೇವರ ವಾಕ್ಯವನ್ನು, ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ (1 ಕೊರಿಂಥದವರಿಗೆ 2:4,5; ಇಬ್ರಿಯರಿಗೆ 2:3,4). ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆಯು ನಮ್ಮ ಗುರಿಯಾಗಿದೆ.

ಬೆಂಗಳೂರಿನ ಆಲ್ ಪೀಪಲ್ಸ್ ಸಭೆಯು ಬೆಂಗಳೂರಿನಲ್ಲಿ ಮುಖ್ಯ ನೆಲೆಯಾಗಿದ್ದುಕೊಂಡು ಭಾರತದಲ್ಲಿ ಅನೇಕ ಇತರ ಸ್ಥಳಗಳಲ್ಲಿ ಸಭೆಗಳನ್ನು ಹೊಂದಿದೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್ ನ್ನು ಸಂಪರ್ಕಿಸಿರಿ. **apcwo.org/locations** ಅಥವಾ **contact@apcwo.org** ಗೆ ಇಮೇಲ್ ಕಳುಹಿಸಿರಿ.

# ಉಚಿತ ಪ್ರಕಾಶನಗಳು

A Church in Revival
A Real Place Called Heaven
A Time for Every Purpose
Ancient Landmarks
Baptism in the Holy Spirit
Being Spiritually Minded and Earthly Wise
Biblical Attitude Towards Work
Breaking Personal and Generational Bondages
Change
Code of Honor
Divine Favor
Divine Order in the Citywide Church
Don't Compromise Your Calling
Don't Lose Hope
Equipping the Saints
Foundations (Track 1)
Fulfilling God's Purpose for Your Life
Gifts of the Holy Spirit
Giving Birth to the Purposes of God
God Is a Good God
God's Word—The Miracle Seed
How to Help Your Pastor
Integrity
Kingdom Builders
Laying the Axe to the Root
Living Life Without Strife
Marriage and Family
Ministering Healing and Deliverance
Offenses—Don't Take Them
Open Heavens
Our Redemption
Receiving God's Guidance
Revivals, Visitations and Moves of God
Shhh! No Gossip!
Speak Your Faith
The Conquest of the Mind
The Father's Love
The House of God
The Kingdom of God
The Mighty Name of Jesus
The Night Seasons of Life
The Power of Commitment
The Presence of God
The Redemptive Heart of God
The Refiner's Fire
The Spirit of Wisdom, Revelation and Power
The Wonderful Benefits of Praying in Tongues
Timeless Principles for the Workplace
Understanding the Prophetic
Water Baptism
We Are Different
Who We Are in Christ
Women in the Workplace
Work—Its Original Design

ಹೊಸ ಪುಸ್ತಕಗಳು ನಿಯಮಿತವಾಗಿ ಬಿಡುಗಡೆಗೊಳ್ಳುತ್ತವೆ. ಆಲ್ ಪೀಪಲ್ಸ್ ಸಭೆಯ ಕ್ರಿಸ್ತೀಯ ಉಚಿತ ಪುಸ್ತಕಗಳನ್ನು ಪಿ. ಡಿ. ಎಫ್ ನಲ್ಲಿ, ಆಡಿಯೋ ಮತ್ತು ಇತರ ಸ್ವರೂಪಗಳಲ್ಲಿ ಡೌನ್ಲೋಡ್ ಮಾಡಲು ದಯವಿಟ್ಟು **apcwo.org/books** ನಿಂದ ಸಂಗ್ರಹಿಸಿರಿ. ಇವುಗಳಲ್ಲಿ ಅನೇಕ ಪುಸ್ತಕಗಳು ಇತರ ಭಾಷೆಗಳಲ್ಲೂ ಸಹ ದೊರೆಯುತ್ತವೆ. ಉಚಿತ ಆಡಿಯೋ ಮತ್ತು ವಿಡಿಯೋ ಸಂದೇಶಗಳು, ಪ್ರಸಂಗ ಟಿಪ್ಪಣಿಗಳು ಮತ್ತು ಇತರ ಉಚಿತ ಅಧ್ಯಯನ ಸಂಗ್ರಹಗಳಿಗಾಗಿ ದಯವಿಟ್ಟು **apcwo.org/sermons** ನ್ನು ಸಂಪರ್ಕಿಸಿರಿ.

# ಕ್ರಿಸಾಲಿಸ್ ಕೌನ್ಸೆಲಿಂಗ್

ಕ್ರಿಸಾಲಿಸ್ ಕೌನ್ಸೆಲಿಂಗ್ ಜನರು ಜೀವನದ ಸವಾಲುಗಳನ್ನು ಎದುರಿಸಲು ಮತ್ತು ಜಯಿಸಿ ಹೊರಬರಲು ಸಹಾಯ ಮಾಡಲು ವೈಯಕ್ತಿಕ ಸಲಹೆಯನ್ನು ನೀಡುತ್ತದೆ. ಕ್ರಿಸಾಲಿಸ್ ಕೌನ್ಸೆಲಿಂಗ, ತರಬೇತಿ ಪಡೆದ ವೃತ್ತಿಪರ ಮತ್ತು ಅನುಭವಿ ಕ್ರೈಸ್ತೀಯ ಸಲಹೆಗಾರರ ತಂಡವಾಗಿದೆ.

ನಮ್ಮ ಸೇವೆಗಳು ಎಲ್ಲಾ ವಯೋಮಾನದವರಿಗೆ ಮತ್ತು ವಿಶಾಲ ವ್ಯಾಪ್ತಿಯ ಜೀವನದ ಸವಾಲುಗಳ ಕುರಿತು ಸಂಬೋಧಿಸುವದಾಗಿದೆ.

**ಹದಿಹರೆಯದವರು**

**ವಯಕ್ತಿಕ ಹೊಂದಾಣಿಕೆಗಳು**

**ಸಂಭಂದಿತ ಸವಾಲುಗಳು**

**ಶೈಕ್ಷಣಿಕ ಕಡಿಮೆ ಸಾಧನೆ**

**ಕೆಲಸಕ್ಕೆ ಸಂಭಂದಿಸಿದ ಸವಾಲುಗಳು**

**ಕುಟುಂಬ / ದಂಪತಿಗಳು: ವಿವಾಹಪೂರ್ವ, ವೈವಾಹಿಕ**

**ಪೋಷಕರು / ಮಕ್ಕಳು / ಒಡಹುಟ್ಟಿದವರು / ಗೆಳೆಯರು**

**ವರ್ತನೆಯ ಅಸ್ತವ್ಯಸ್ತತೆಗಳು**

**ವ್ಯಕ್ತಿತ್ವ ಅಸ್ತವ್ಯಸ್ತತೆಗಳು**

**ಮಾನಸಿಕ / ಭಾವನಾತ್ಮಕ ಸಮಸ್ಯೆಗಳು**

**ಒತ್ತಡ / ಆಘಾತ**

**ಮದ್ಯಪಾನ / ಮಾದಕವಸ್ತು ದುರುಪಯೋಗ**

**ಆತ್ಮೀಕ ಸಮಸ್ಯೆಗಳು**

**ಜೀವನ ತರಬೇತಿ**

ಕ್ರಿಸಾಲಿಸ್ ಕೌನ್ಸೆಲಿಂಗ ಸೇವೆಗಳು ಕೈಗೆಟಕುವ ಶುಲ್ಕಗಳಾಗಿದೆ ಮತ್ತು ಸುಲಭವಾಗಿ ಪಡೆದುಕೊಳ್ಳಬಹುದಾಗಿದೆ.

ನಮ್ಮ ತರಬೇತಿ ಪಡೆದ ಸಲಹೆಗಾರರೊಂದಿಗೆ ನಿಮ್ಮ ನೇಮಕಾತಿಯನ್ನು ನಿಗದಿಪಡಿಸಲು:

**ವೆಬ್ಸೈಟ್: chrysalislife.org**

**ದೂರವಾಣಿ: +91-80-25452617** ಅಥವಾ ಟೋಲ್-ಫ್ರೀ (ಭಾರತದೊಳಗೆ) **1-800-300-00998**

**ಇಮೆಲ್: counselor@chrysalislife.org**

ಕ್ರಿಸಾಲಿಸ್ ಕೌನ್ಸೆಲಿಂಗ್ ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್ ನ ಒಂದು ಸೇವೆಯಾಗಿದೆ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವದು, (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತುಗೊಳಿಸುವದು, (ಇ) ಕ್ರಿಸ್ತನ ಅಂಗವನ್ನು ಕಟ್ಟುವದನ್ನು, ಬಹಳ ಮುಖ್ಯ ಗುರಿಯಾಗಿಸಿಕೊಂಡಿರುವ, ಭಾರತ ದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಬೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾ 'ಸೇವಕರ ಸಮಾವೇಶವನ್ನು' ವರ್ಷಪೂರ್ತಿ ನಡೆಸುವದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಕಗಳನ್ನು ಉಚಿತವಾಗಿ ಹಂಚುವದನ್ನು ಇದಕ್ಕೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳುಹಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆಯುಳ್ಳದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು / ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ" ಬೆಂಗಳೂರಿಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಯಿಸಬಹುದು.

**Account Name:** All Peoples Church

**Account Number:** 50200068829058

**IFSC Code:** HDFC0004367

**Bank:** HDFC Bank, 7M/308 80 Ft Road, HRBR Layout, Kalyan Nagar, Bengaluru- 560043, Karnataka

***ದಯವಿಟ್ಟು ಗಮನಿಸಿ:*** *ಆಲ್ ಪೀಪಲ್ಸ್ ಸಭೆಯು ಭಾರತ ದೇಶದಲ್ಲಿ ಬ್ಯಾಂಕ್ ಖಾತೆ ಹೊಂದಿರುವವರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು. ಹೆಚ್ಚುವರಿ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿರಿ* **apcwo.org/give**.

ಹಾಗೆಯೇ ನಿಮಗೆ ಸಾಧ್ಯವಾಗುವಾಗಲೆಲ್ಲಾ ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ!

**ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!**


## DOWNLOAD THE FREE APP!

*Search for*

"All Peoples Church Bangalore"
in the App or Google play stores.

Available on the App Store

ANDROID APP ON Google play




***A daily 5-minute video devotional.***
***A daily Bible reading and prayer guide.***
***5-minute Sermon summary.***
***Toolkit with Scriptures on various topics to build faith and information to share the Gospel.***
***Resources with sermons, sermon notes, TV programs, books, music and more.***

***IF YOU LOVE IT, TELL OTHERS ABOUT IT!***

# ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು

**apcbiblecollege.org**

ಆಲ್ ಪೀಪಲ್ಸ್ ಸಭೆಯ ಬೈಬಲ್ ಕಾಲೇಜು ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲು ಸಜ್ಜುಗೊಳಿಸಲಾಗುವುದು ಮತ್ತು ಆತ್ಮನಿಂದ ತುಂಬಿದ, ಅಭಿಷೇಕ ಹೊಂದಿದ—ತರಬೇತಿಯನ್ನು ಒದಗಿಸುತ್ತದೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ ಮತ್ತು ಕರ್ತನೊಂದಿಗಿನ ನಿಕಟವಾದ ಸಂಭಂದದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಬೆಳೆಸಬೇಕೆಂದು ನಾವು ನಂಬುತ್ತೇವೆ .

ಆಲ್ ಪಿಪಲ್ಸ್ ಚರ್ಚ್ ಬೈಬಲ್ ಕಾಲೇಜು (ಎಪಿಸಿ-ಬಿಸಿ)ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಿ ಕೊಡಲಾಗಿದೆ.

ನಾವು ಮೂರು ಕಾರ್ಯಕ್ರಮಗಳನ್ನು ನೀಡುತ್ತೇವೆ.

- ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
- ಎರಡು ವರ್ಷದ ಡಿಪ್ಲಮೋ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (D.Th.)
- ಮೂರು ವರ್ಷದ ಬ್ಯಾಚೆಲೊರ್ಸ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತೀದಿನ **ಸೋಮವಾರದಿಂದ ಶುಕ್ರವಾರದವರೆಗೆ ಬೆಳ್ಳಿಗ್ಗೆ 9 ರಿಂದ ಮಧ್ಯಾಹ್ನ 12** ರವರೆಗೆ ಜರಗುತ್ತದೆ. ಭಾರತದ ಕಾಲಮಾನ (**ಸಂಘಟಿತ ಸಾರ್ವತ್ರಿಕ ಸಮಯ+5:30**). ನಾವು ಇತರೆ ಮೂರು ಕಲಿಕಾ ಆಯ್ಕೆಯನ್ನು ನೀಡುತ್ತೇವೆ.

- **ಆನ್–ಕ್ಯಾಂಪಸ್:** ಅಧ್ಯಯನ ಆವರಣದಲ್ಲಿ ವಯಕ್ತಿಕ ತರಗತಿಗಳಿಗೆ ಹಾಜರಾಗುವುದು.
- **ಆನ್ ಲೈನ್:** ಆನ್ ಲೈನ್ ನ ನೇರ ಉಪನ್ಯಾಸಗಳಿಗೆ ಹಾಜರಾಗುವದು.
- **ಇ–ಕಲಿಕೆ:** ಆನ್ ಲೈನ್ ಪೋರ್ಟಲ್ ಆದ **apcbiblecollege.org/elearn** ನ ಮೂಲಕ ಸ್ವಯಂ ಚಾಲಿತವಾಗಿ ಕಲಿಯುವದು.

**ಆನ್ಲೈನ್ ನಲ್ಲಿ ಅರ್ಜಿಸಲ್ಲಿಸಲು** ಮತ್ತು ಕಾಲೇಜು ಪಠ್ಯಕ್ರಮ, ಅರ್ಹತಾ ಮಾನದಂಡ, ಬೋಧನಾ ವೆಚ್ಚಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿ ನಮೂನೆಯನ್ನು ಡೌನ್ಲೋಡ್ ಮಾಡಲು ದಯವಿಟ್ಟು **apcbiblecollege.org** ಯನ್ನು ಸಂಪರ್ಕಿಸಿ.

ಉಜ್ಜೀವನವು ದೇವರ ಸಂದರ್ಶನದ ಕಾಲ. ಅದು ಭೂಮಿಯ ಮೇಲೆ ಪರಲೋಕದ ಸುರಿಸುವಿಕೆಯೆ ಒಂದು ಕಾಲವಾಗಿದೆ. ಸಂದರ್ಶನದ ಕಾಲದಲ್ಲಿ ಸಂಗತಿಗಳು ವ್ಯತ್ಯಾಸಕರವಾಗಿರುತ್ತದೆ! ಉಜ್ಜೀವನ–ಒಂದು ಸುರಿಸುವಿಕೆ ಅಥವಾ ಒಂದು ಸಂದರ್ಶನ ಕಳುಹಿಸಿ ಕೊಡು ಎಂಬದಾಗಿ ದೇವರಲ್ಲಿ ನಾವು ಪ್ರಾರ್ಥಿಸುತ್ತಾ ಕೇಳುತ್ತೇವೆ ಆದರೆ ಉಜ್ಜೀವನ ಸಂಭವಿಸುವಾಗ ನಾವು ಅದಕ್ಕೆ ಸಿದ್ಧರಿದ್ದೇವೋ? ಉಜ್ಜೀವನ ಕಾಣಿಸಿಕೊಳ್ಳುವಾಗ ನಾವು ಅದಕ್ಕೆ ಸಿದ್ಧರಾಗಿರಬೇಕು!

ಉಜ್ಜೀವನ ಸಂಭವಿಸುವಾಗ ಒಂದು ಸಭೆ ಹೇಗೆ ಕಾಣಿಸುತ್ತದೆ? ನಾವು ಒಂದು ಉಜ್ಜೀವನದ ಮಧ್ಯದಲ್ಲಿರುವಾಗ–ಅಲ್ಲಿ ಪರಲೋಕದ ಒಂದು ಸುರಿಸುವಿಕೆಯಿರುವಾಗ, ದೇವರ ಸಂದರ್ಶನವಿರುವಾಗ ನನಗೆ ಮತ್ತು ನಿಮಗೆ ಏನು ಸಂಭವಿಸುತ್ತದೆ? ಈಗ ನಾವು ತಿಳಿದಿರುವ ರೀತಿಯಲ್ಲಿ ಸಭೆಯು ಕಾಣಿಸುವದಿಲ್ಲ ಎಂಬುವದು ಖಚಿತವಾದ ಒಂದು ಸಂಗತಿಯಾಗಿದೆ. ಈ ಸಂದೇಶದ ಉದ್ದೇಶವು ದೇವರ ಚಲಿಸುವಿಕೆಯಿರುವಾಗ ಮತ್ತು ನಾವು ಪರಲೋಕದ ಒಂದು ಸಂದರ್ಶನದ ಕಡೆಗೆ ಸಾಗುವಾಗ ಸಭೆಯ ಜೀವಿತ ಹೇಗಿರುತ್ತದೆ ಎಂದು ಒಂದು ಚಿತ್ರಣ ಅಥವಾ ದರ್ಶನವನ್ನು ನಮಗೆ ಕೊಡುವದಾಗಿದೆ.

ದೇವರ ಸುರಿಸುವಿಕೆಗಾಗಿ ಸಿದ್ಧವಾಗಿರ್ರಿ!

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org